# ಸಂಕೇತಿ ವಾರ್ತಾ

ಬೆಟ್ಟದಪುರ ಸಂಕೇತಿ ಸಂಘದ ಮಾಸಪತ್ರಿಕೆ

ಶ್ರೀ ತಾರಣ ಸಂ॥ ಕಾರ್ತೀಕ ಮಾಸ ಸಂಪುಟ - ೧೯

ನವೆಂಬರ್ - ೨೦೦೪ ಸಂಚಿಕೆ - ೧೧


## The Medium for the Power of Mantra

THE MANTRA is a formulated realisation in words of a Rishi's spiritual eminence. What is spiritually mature in our inner being, finding verbal expression is a mantra. A mantra will serve fully one who has discovered it. To others, such as disciples who accept him as guru, the mantra has a great use value. A physicist uses a telescope or a chemist uses a microscope. They may not know the construction of the tool they ably use with scientific relish. Disciples use mantras with felicity. **Mantras yield their full power, provided all the conditions are followed.** One such condition is the PRONUNCIATION must be flaw less. A little flaw will render the mantra ineffective or sterile.

People in distress pray. Prayers are answered, sometimes are not answered. People go to a Guru in great numbers, believing in the great power of the Guru. At times of crisis, they expect the Guru to relieve their distress. Occasions vary. Often the problem is solved, often it is not. The disciple wonders why. 'Does the Guru have no power?' he asks himself. It is true the Guru has





great powers. It is equally true that every human guru has human limitations. When we invoke the Spirit, many times our prayers are un answered. Of course, we understand that our prayers must be the right ones and must be sincere. There are honest prayers sometimes not answered by the Spirit. **Are we to understand that the Spirit also has its own limitations?** No, the Spirit has no such limitations. Why, then, is the prayer not answered? That is a wider philosophical question which I shall not attempt to answer here. Let me confine myself to saying how the Spirit can be made to respond. **As the mantra yields its full power to perfect pronunciation, the Spirit moves into action when TRUTH in the prayer is utterly truthful.** The medium for mantric power is swaram, the tune and its pronunciation. The medium for spiritual power to act in life answering our right prayers that are sincere is truthfulness in word and deed. Such a truthfulness is some times called SINCERITY, sometimes PURITY. The Spirit never fails. Its power is unfailing. How can God fail, especially when He is coming towards you, anxious to relate to you? **Still, for God to act, the conditions must be fulfilled.** God acts unconditionally in the lives of those who have surrendered unconditionally.


Karmayogi can be contacted
at mssindia@vsnl.net

# ಅಧ್ಯಕ್ಷ ನುಡಿ



ಸಾಂಸ್ಕೃತಿಕ ವಲಯದಲ್ಲಿ ವಿಶಿಷ್ಟ ಸ್ಥಾನ ಸಂಪಾದಿಸಿರುವ ಸಂಕೇತಿ ಸಮುದಾಯದ ಸಂಭ್ರಮಕ್ಕೆ ಸಹೃದಯ ಕಲಾವಿದ **ಶ್ರೀ ಆರ್. ಕೆ. ಪದ್ಮನಾಭ** ಅವರಿಗೆ ಸಂದಿರುವ ರಾಜ್ಯ ಸರ್ಕಾರದ ಗೌರವದಿಂದ ಮತ್ತಷ್ಟು ಮೆರುಗು ಬಂದಿದೆ. ಈ ಸಾಲಿನ ರಾಜ್ಯೋತ್ಸವ ಪ್ರಶಸ್ತಿಗೆ ಪಾತ್ರರಾಗಿರುವ ವಿದ್ವಾನ್ ಆರ್. ಕೆ. ಪದ್ಮನಾಭ ಅವರಿಗೆ ಸಂಘದ ಪರವಾಗಿ ಅಭಿಮಾನದ, ಹೆಮ್ಮೆಯ ಅಭಿನಂದನೆಗಳು. ಗಾನಕಲಾ ಪರಿಷತ್ತಿನ ಅಧ್ಯಕ್ಷರಾಗಿರುವ ಗಾನಕಲಾ ಭೂಷಣ ಪದ್ಮನಾಭ ಅವರು ಪ್ರತಿಭಾಸಂಪನ್ನರಷ್ಟೇ ಅಲ್ಲದೆ ಕ್ರಿಯಾಶೀಲ ಕಲಾವಿದರಾಗಿ, ಗಂಭೀರ ಗುರುಗಳಾಗಿ ಖ್ಯಾತರು. ನೂರಾರು ಉತ್ಸಾಹೀ ಯುವ ಕಲಾವಿದರಿಗೆ ಮಾರ್ಗದರ್ಶಕರಾಗಿರುವ ಶ್ರೀಯುತರು ನಾಡಿನ ಪ್ರಮುಖ ಗಾಯಕರಷ್ಟೇ ಅಲ್ಲದೆ ಕೀರ್ತನ ರಚನಕಾರರೂ ಆಗಿದ್ದು, ಸಂಗೀತದ ದಿಗ್ಗಜರಾದ ಮುತ್ತುಸ್ವಾಮಿ ದೀಕ್ಷಿತರ್, ಪುರಂದರದಾಸ, ತ್ಯಾಗರಾಜರ, ಶ್ಯಾಮಾ ಶಾಸ್ತ್ರಿಗಳ ಜೀವನ-ಸಾಧನೆಗಳನ್ನು ಬಿಂಬಿಸುವ ನಾಟಕ ರೂಪಕಗಳಲ್ಲಿ ಅಭಿನಯಿಸಿ ವಿನೂತನ ಪ್ರಯೋಗಗಳನ್ನು ಯಶಸ್ವಿಯಾಗಿ ಮಾಡಿದ್ದಾರೆ.

ಸಂಗೀತ ಕ್ಷೇತ್ರಕ್ಕೆ ಮೀಸಲಾಗಿರುವ ವಾದಿರಾಜ ಕಲಾಭವನದ ರೂವಾರಿಯಾಗಿರುವ ಶ್ರೀ ಪದ್ಮನಾಭ ಅವರು ಕಿರಿಯರಿಗೆ ಆದರ್ಶವಾಗಿದ್ದಾರೆ. ಸುಮಾರು 13 ವರ್ಷಗಳ ನಂತರ ಸಂಕೇತಿ ಬಾಂಧವರಿಗೆ ಲಭಿಸುತ್ತಿರುವ ಈ ಗೌರವಕ್ಕೆ ಶ್ರೀ ಪದ್ಮನಾಭ ಅವರಿಗೆ ಮತ್ತೊಮ್ಮೆ ಹಾರ್ದಿಕ ಅಭಿನಂದನೆಗಳನ್ನು ಸಲ್ಲಿಸುತ್ತಾ ಅವರಿಂದ ಇನ್ನೂ ಹೆಚ್ಚಿನ ಸಾಧನೆಗಳು ಕಾರ್ಯಗತವಾಗಲಿ ಎಂದು ಆಶಿಸುತ್ತೇನೆ.

ಸಂಘದ ಶ್ರೇಯೋಭಿವೃದ್ಧಿಗೆ ಉದಾರ ಕೊಡುಗೆಗಳನ್ನು ನೀಡುತ್ತಾ ಬಂದಿರುವ **ಶ್ರೀ ಆರ್.ಜಿ.ಎನ್. ಸ್ವಾಮಿ** ಅವರು ಒಂದು ಉತ್ತಮವಾದ ಯೋಜನೆಯನ್ನು





ನಮ್ಮ ಮುಂದೆ ಇರಿಸಿದ್ದಾರೆ. ಅದೇ **'ಸಂಕೇತಿ ಡಯಾಗ್ನೋಸ್ಟಿಕ್ ಸೆಂಟರ್'** (Sankethi Diagnostic Centre) ಆರೋಗ್ಯಕ್ಕೆ ಸಂಬಂಧಿಸಿದ ಅವಶ್ಯಕತೆಗಳನ್ನು ಪೂರೈಸುವ ಈ ಕೇಂದ್ರವು ಸಂಕೇತಿಗಳಿಗೆ ರಿಯಾಯ್ತಿ ದರದಲ್ಲಿ ಸೇವೆಯನ್ನು ನೀಡುವ ಉದ್ದೇಶವಿರುವ ಈ ಕೇಂದ್ರದ ನಿರ್ಮಾಣದ ವೆಚ್ಚ ಸುಮಾರು ಎರಡು ಕೋಟಿ ರೂ. ಆಗಬಹುದೆಂದು ಅಂದಾಜು ಮಾಡಲಾಗಿದೆ. ಸ್ಥಾಪನೆಗೆ ಬೇಕಾದ ವ್ಯವಸ್ಥೆಗಳ ಉಸ್ತುವಾರಿಯನ್ನು ಶ್ರೀ ಆರ್. ಜಿ. ಎನ್. ಸ್ವಾಮಿ ಅವರೇ ನೋಡಿಕೊಳ್ಳಲಿದ್ದಾರೆ. ಬಂಡವಾಳ ಮತ್ತು ವೈದ್ಯಕೀಯ ವಿವರಗಳ ಜವಾಬ್ದಾರಿಯನ್ನು ನಮ್ಮ ಎಲ್ಲಾ ಬಾಂಧವರು ಮತ್ತು ಸಂಕೇತಿ ವೈದ್ಯರು ವಹಿಸಿಕೊಳ್ಳಬೇಕೆಂದು ನಮ್ಮ ಆಸೆ. ಮುಖ್ಯವಾಗಿ ನಮ್ಮ ವೈದ್ಯಬಾಂಧವರು ಈ ವಿಷಯದಲ್ಲಿ ಸಂಘಕ್ಕೆ ಹೆಚ್ಚಿನ ಸಹಕಾರ ನೀಡಬೇಕೆಂದು ಕೋರುತ್ತೇನೆ.

– ಎಂ ನರಸಿಂಹನ್

## ರಾಜ್ಯೋತ್ಸವ ಪ್ರಶಸ್ತಿ



ಶ್ರೀ ಆರ್. ಕೆ. ಪದ್ಮನಾಭ ಅವರು ರಾಜ್ಯೋತ್ಸವ ಪ್ರಶಸ್ತಿಯನ್ನು ಮುಖ್ಯಮಂತ್ರಿ ಶ್ರೀ ಧರಮ್‌ಸಿಂಗ್ ಅವರಿಂದ ಸ್ವೀಕರಿಸುತ್ತಿರುವುದು

# ಕಾರ್ಯದರ್ಶಿ ಕಾಲಂ



ತಮಗೆಲ್ಲ ತಿಳಿದಿರುವಂತೆ ಡಿಸೆಂಬರ್‌ನಲ್ಲಿ ನಡೆಯಲಿರುವ ಅಖಿಲ ಕರ್ನಾಟಕ ಬ್ರಾಹ್ಮಣ ಸಮ್ಮೇಳನದಲ್ಲಿ ಸಂಕೇತಿ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು.

ಸಮ್ಮೇಳನದ ಯಶಸ್ಸಿನಲ್ಲಿ ಹಿರಿದಾದ ಪಾತ್ರ ನಮ್ಮದಾಗಿರಬೇಕು. ಸಮ್ಮೇಳನದ ಅಂಗವಾಗಿ ನಡೆಯಲಿರುವ ಮೆರವಣಿಗೆಯಲ್ಲಿ ಸಂಕೇತಿ ಬಾಂಧವರು ಹೆಚ್ಚು ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಬೇಡುತ್ತೇನೆ. ಇದನ್ನೇ ಆಹ್ವಾನವೆಂದು ಎಲ್ಲರೂ ಸ್ವೀಕರಿಸಬೇಕಾಗಿ ವಿನಂತಿ.

ಸಂಕೇತಿ ಬಾಂಧವರ ವಿಳಾಸ ಪುಸ್ತಕದ (Address Book) ಪರಿಷ್ಕೃತ ಆವೃತ್ತಿಯು (ಜನವರಿ 1, 2005ರಂತೆ) ಶೀಘ್ರದಲ್ಲೇ ಬಿಡುಗಡೆಯಾಗಲಿದೆ. ದಯಮಾಡಿ ಯಾವುದೇ ಬದಲಾವಣೆಗಳನ್ನು (ವಿಳಾಸ ಅಥವಾ ದೂರವಾಣಿ ಸಂಖ್ಯೆಯ) ತಕ್ಷಣವೇ ಸಂಘಕ್ಕೆ ತಿಳಿಸಿ ಎಂದು ಕೋರುತ್ತೇನೆ.

ಬಾಂಧವರಿಗೆ ಸಂಬಂಧಿಸಿದ ಶುಭ ಸಮಾರಂಭಗಳಿಗೆ ಸಂಘದಿಂದ ಫಲಕಗಳು ಸರಿಯಾದ ಸಮಯಕ್ಕೆ ದೊರೆಯಬೇಕಾದರೆ ನಮಗೆ ಸಮಾರಂಭದ ಬಗ್ಗೆ ಮಾಹಿತಿಯು ಮುಂಚಿತವಾಗಿ ಸಿಗಬೇಕಲ್ಲವೆ ? ದಯವಿಟ್ಟು ಬಾಂಧವರು ತಪ್ಪದೇ ಮುಂಚಿತವಾಗಿ ವಿವರಗಳನ್ನು ಸಂಘಕ್ಕೆ ಕಳುಹಿಸಿಕೊಡಬೇಕಾಗಿ ವಿನಂತಿ.

**- ಆರ್. ಎಸ್. ಭಾಸ್ಕರ ಅವಧಾನಿ**





# ★ ಶುಭ ಸಮಾಚಾರಗಳು ★

## ಗೃಹಪ್ರವೇಶ

| ತಾರೀಖು | ಹೆಸರು |
|---|---|
| 17.10.04<br>ಬೆಂಗಳೂರು | **ಶ್ರೀಮತಿ ಆರ್.ಕೆ. ಗೀತಾಮಣಿ ಮತ್ತು ಶ್ರೀ ಹೆಚ್.ವಿ. ಶ್ರೀನಿವಾಸ** |
| 18.10.04<br>ಬೆಂಗಳೂರು | **ಶ್ರೀಮತಿ ಸಾವಿತ್ರಿ ಮತ್ತು ಶ್ರೀ ಕೃಷ್ಣ ಬಿ. ಕೆ.**<br>(ಬೆಟ್ಟದಪುರದ ಶ್ರೀಮತಿ ಪುಟ್ಟಲಕ್ಷಮ್ಮ ಮತ್ತು ವೇ।। ಬ್ರ।। ಶ್ರೀ।। ಕೃಷ್ಣಾವಧಾನಿಗಳ ಪುತ್ರ) |
| 31.10.04<br>ಬೆಂಗಳೂರು | **ಶ್ರೀಮತಿ ಮೀನಾಕ್ಷಿ ಮತ್ತು ಶ್ರೀ ರಾಧೇಶ್** |
| 01.11.04<br>ಬೆಂಗಳೂರು | **ಶ್ರೀಮತಿ ಗೀತಾ ಮತ್ತು ಶ್ರೀ ಸುದರ್ಶನ್**<br>(ಶ್ರೀಮತಿ ಭಾಗ್ಯಲಕ್ಷ್ಮಿ ಎಸ್. ಜಿ ಕೃಷ್ಣಮೂರ್ತಿ ಅವರ ಪುತ್ರಿ) |

## ಹುಟ್ಟುಹಬ್ಬ

| ತಾರೀಖು | ಹೆಸರು |
|---|---|
| 24.10.04<br>ಬೆಂಗಳೂರು | **ಚಿ।। ಸಾಗರಿಕಾ**<br>(ಶ್ರೀಮತಿ ಮತ್ತು ಶ್ರೀ ಪಿ. ವಿ. ಪಟ್ಟಾಭಿ ಅವರ ದ್ವಿತೀಯ ಪುತ್ರಿ)<br>(ಶ್ರೀಮತಿ ಗೀತಾಮಣಿ ಮತ್ತು ಶ್ರೀ ಎಸ್. ಎನ್. ಶ್ರೀನಿವಾಸ ಮೂರ್ತಿ ಅವರ ಮೊಮ್ಮಗಳು) |

## ಅಕ್ಟೋಬರ್ ತಿಂಗಳಲ್ಲಿ ಸಂಘಕ್ಕೆ ಬಂದ ಕೊಡುಗೆಗಳು

### ಆಜೀವ ಸದಸ್ಯತ್ವ (ರೂ. 100)

| ಹೆಸರು | ಊರು | ರ. ನಂ. | ಆ.ಸ.ಸಂ. |
|---|---|---|---|
| ಅರುಣ್. ಎಲ್. | ಬೆಂಗಳೂರು | 7136 | 1817 |
| ಶ್ಯಾಮಸುಂದರ್. ಹೆಚ್.ಆರ್ | ಬೆಂಗಳೂರು | 7143 | 1818 |
| ರವಿಶಂಕರ್ ಹೆಚ್. ಆರ್ | ಬೆಂಗಳೂರು | 7144 | 1819 |

## ಸಭಾ ತಾಂಬೂಲಗಳು :

| ಹೆಸರು | ಊರು | ರ. ನಂ. | ಆ.ಸ.ಸಂ. |
|---|---|---|---|
| ಜಗದೀಶ್. ಕೆ. | ಬೆಂಗಳೂರು | 7142 | 51.00 (ಮಗನ ಉಪನಯನ) |
| ಕೃಷ್ಣ. ಬಿ. ಕೆ. | ಪುಣೆ | 7148 | 200.00 (ಗೃಹಪ್ರವೇಶ) |
| ಪಟ್ಟಾಭಿ. ಪಿ. ವಿ. | ಬೆಂಗಳೂರು | 7149 | 100.00 (ಮಗಳ ಹುಟ್ಟುಹಬ್ಬ) |
| ಶ್ರೀನಿವಾಸ ಹೆಚ್. ವಿ. | ಬೆಂಗಳೂರು | 7152 | 200.00 (ಗೃಹಪ್ರವೇಶ) |
| ರಾಧೇಶ್ | ಬೆಂಗಳೂರು | 7153 | 101.00 (ಗೃಹಪ್ರವೇಶ) |

## ವಾರ್ತಾ / ಜಾಹೀರಾತು ಫಂಡ್ :

| ಹೆಸರು | ಊರು | ರ. ನಂ. | ರೂ.ಗಳು |
|---|---|---|---|
| ಹೆಚ್. ಕೆ. ಸತ್ಯಪ್ರಕಾಶ್ | ಬೆಂಗಳೂರು | 7137 | 100.00 |

## ಹಾಸ್ಟೆಲ್ ಅನ್ನದಾನ ನಿಧಿ :

| ಹೆಸರು | ಊರು | ರ. ನಂ. | ರೂ.ಗಳು |
|---|---|---|---|
| ವಿಜಯಕುಮಾರ್. ಎಸ್. | ಬೆಂಗಳೂರು | 7134 | 500.00 (ತಂದೆಯ ನೆನಪು) |
| ನಂದಕುಮಾರ್. ಆರ್. ಕೆ. | ಬೆಂಗಳೂರು | 7141 | 400.00(ಮಕ್ಕಳ ಹುಟ್ಟುಹಬ್ಬ) |
| ಸರೋಜಾರಾಜ್ } ಡಾ. ವಿನೋದ್, ಕಿರಣ್ | ಬೆಂಗಳೂರು | 7146 | 4,000.00(ಗುರುರಾಜ್ ನೆನಪು) |

## ವಿದ್ಯಾರ್ಥಿ ವೇತನ ನಿಧಿ :

| ಹೆಸರು | ಊರು | ರ. ನಂ. | ರೂ.ಗಳು |
|---|---|---|---|
| ಡಾ. ಆರ್.ಎಸ್. ಜಯಶ್ರೀ | ಬೆಂಗಳೂರು | 7140 | 2,000.00 |

## ವಾರ್ತಾ ಪೋಷಕರು :

| ಹೆಸರು | ಊರು | ರ. ನಂ. | ರೂ.ಗಳು |
|---|---|---|---|
| ಬಿ.ಎನ್. ವೆಂಕಟರಾಮಯ್ಯ | ಬೆಂಗಳೂರು | 7135 | 1,000.00 |
| ಮೋಹನಮೂರ್ತಿ | ಬೆಂಗಳೂರು | 7151 | 1,000.00 |





## ಅಕ್ಟೋಬರ್ ತಿಂಗಳಲ್ಲಿ ನಡೆದ ಹಾಸ್ಟೆಲ್ ಅನ್ನದಾನ ಸೇವಾ :

| ತಾರೀಖು | ಹೆಸರು | ಜ್ಞಾಪಕಾರ್ಥ |
|---|---|---|
| 01.10.04 ಬೆಂಗಳೂರು | ನಾಗರಾಜ ರಾವ್ ಕೆ. ಎಸ್. | ತಾಯಿ ಸಾವಿತ್ರಮ್ಮ |
| 01.10.04 ಯು.ಎಸ್.ಎ. | ಡಾ. ಚಂದ್ರಶೇಖರ್. ಆರ್ | ತಂದೆ ಮತ್ತು ತಾಯಿ ಆರ್.ಎಸ್. ರಾಮ ಸ್ವಾಮಯ್ಯ ಮತ್ತು ಸಾವಿತ್ರಮ್ಮ |
| 01.10.04 ಬೆಂಗಳೂರು | ಜ್ಯೋತಿ ಛಾರಿಟಬಲ್ ಟ್ರಸ್ಟ್ 6 ದಿನಗಳು | ಜ್ಯೋತಿ |
| 02.10.04 ಮೈಸೂರು | ಕಾವೇರಮ್ಮ | ಅವರ ಹುಟ್ಟುಹಬ್ಬ |
| 02.10.04 ಲಂಡನ್ | ಚಿದಂಬರ ಹೆಚ್.ವಿ. | ಅಜ್ಜ ಆರ್ಎಸ್ ಸುಬ್ಬರಾವ್ |
| 02.10.04 ದೆಹಲಿ | ಸಾವಿತ್ರಮ್ಮ ರಾವ್ | ಪಿರಿಯಾಪಟ್ಟಣ ಸದಾಶಿವ ರಾವ್ |
| 05.10.04 ಬೆಂಗಳೂರು | ಎಸ್. ವಿಜಯಕುಮಾರ್ | ತಂದೆ ಹೆಚ್. ವಿ. ಶ್ರೀನಿವಾಸಯ್ಯ |
| 06.10.04 ಬೆಂಗಳೂರು | ಆರ್.ಕೆ. ನಂದಕುಮಾರ್ | ಆಲೋಕ ಮತ್ತು ಅಖಿಲರ ಹುಟ್ಟುಹಬ್ಬ |
| 08.10.04 ಬೆಂಗಳೂರು | ರಾವ್ ಬಿ.ಎನ್.ಎಸ್. | ತಂದೆ ಗದ್ವಾಲ್ ನಾರಣಪ್ಪ |
| 08.10.04 ಯು.ಎಸ್.ಎ. | ರಾಮಚಂದ್ರ ಮತ್ತು ವೈದೇಹಿ ಶಿವಶಂಕರ್ | ಮಗ ರಾಮ ಶಿವಶಂಕರ್ |
| 10.10.04 ಬಾಂಬೆ | ಚಿತ್ತರಂಜನ್ ಬಿ. ಎನ್. | ತಾಯಿ ಅನ್ನಪೂರ್ಣ |

| ತಾರೀಖು | ಹೆಸರು | ಜ್ಞಾಪಕಾರ್ಥ |
|---|---|---|
| 12.10.04 ಬಾಂಬೆ | ಶ್ರೀಕಂಠ ಹೆಚ್. ಎಸ್. | ತಂದೆ ಹೆಚ್. ಎಸ್. ಶಿವರಾಮಯ್ಯ |
| 14.10.04 ಬೆಂಗಳೂರು | ಶಕುಂತಲಾ ವೆಂಕಟಕೃಷ್ಣಪ್ಪ | ರಾಮಕೃಷ್ಣಯ್ಯ (ವಿಶ್ವಾಸಿ) |
| 21.10.04 ಬೆಂಗಳೂರು | ಲಲಿತಮ್ಮ ಕಾಲಭೈರವನ್ | ಪುಟ್ಟಮ್ಮ (ಚಿಕ್ಕಮ್ಮ) |
| 22.10.04 ಬೆಂಗಳೂರು | ರಾಮಸ್ವಾಮಿ ಆರ್. ಸಿ. | ತಾಯಿ ಸುಶೀಲಮ್ಮ |
| 22.10.04 ಬೆಂಗಳೂರು | ಡಾ. ಮೋಹನ್ ರಾಂ. ಎಸ್. | ತಾಯಿ |
| 23.10.04 ಬೆಂಗಳೂರು | ರಾಮಸ್ವಾಮಿ ಬಿ. ವಿ. | ತಂದೆ |
| 23.10.04 ಮೈಸೂರು | ಬೆಟ್ಟದಪುರ ಸಂಕೇತಿ ಮಂಗಳಕಾರ್ಯ ಸಮಿತಿ (ಬಿ.ಎಸ್.ಎಂ. ಅಭಿವೃದ್ಧಿ ನಿಧಿ) | |
| 23.10.04 ಪುಣೆ | ಸರೋಜಮ್ಮ ಕೃಷ್ಣಮೂರ್ತಿ | |
| 23.10.04 ಬೆಂಗಳೂರು | ಅಂಶುಮಾಲಿನಿ ಎಂ.ಎಸ್ ಮತ್ತು ಸಹೋದರಿಯರು ಹಾಗೂ ಸಹೋದರ | ತಾಯಿ ಯಶೋದಮ್ಮನವರ ಹುಟ್ಟುಹಬ್ಬ |
| 27.10.04 ಬೆಂಗಳೂರು | ಶಕುಂತಲಾ ವೆಂಕಟಕೃಷ್ಣಪ್ಪ | ಬಿ.ವಿ.ಎಸ್. ಮಾಮ |
| 27.10.04 ಬೆಂಗಳೂರು | ಗೀತಾಮಣಿ ಆರ್.ಕೆ. | ತಂದೆ ಕೃಷ್ಣ ದೀಕ್ಷಿತ್ |
| 28.10.04 ಬೆಂಗಳೂರು | ಅವಧಾನಿ ಬಿ. ವಿ. ಟಿ. | ತಂದೆ ವೆಂಕಟರಮಣ ಅವಧಾನಿ |





| ತಾರೀಖು | ಹೆಸರು | ಜ್ಞಾಪಕಾರ್ಥ |
|---|---|---|
| 28.10.04 ಬೆಂಗಳೂರು | ಜ್ಯೋತಿ ಛಾರಿಟಬಲ್ ಟ್ರಸ್ಟ್ | ಜ್ಯೋತಿ |
| 29.10.04 ಮೈಸೂರು | ಕೇಶವಮೂರ್ತಿ ಹರವೆ | ತಾಯಿ ತಂಗಚ್ಚಮ್ಮ |
| 29.10.04 ಮೈಸೂರು | ಸುಬ್ರಹ್ಮಣ್ಯ ಆರ್.ಎಸ್ ಶಾಂತಮ್ಮ, ಸರಸ್ವತಿ | ತಾಯಿ ಕಮಲಮ್ಮ ತಂದೆ ನಾರಾಯಣ ರಾವ್ |
| 29.10.04 ಬಾಂಬೆ | ಕೃಷ್ಣಮೂರ್ತಿ ಆರ್. ವಿ. | ತಾಯಿ ಪುಟ್ಟಮ್ಮ ವೆಂಕಟರಾಮಯ್ಯ |



## ಪ್ರತಿಭೆ

**ಚಿ|| ಡಿ. ಹರ್ಷ, ಬಿ.ಇ. (ಸಿವಿಲ್) ಶೇ. 93.33,**
ಎಸ್.ಜೆ.ಸಿ.ಇ., ಮೈಸೂರು

ಸಂಗೀತದಲ್ಲಿ ಆಸಕ್ತಿ, Keyboard ನಲ್ಲಿ ಪ್ರವೀಣ, National Technical Seminar ನಲ್ಲಿ "Robotics in Civil Eng" ಎಂಬ ವಿಷಯದಲ್ಲಿ ಪ್ರಬಂಧವನ್ನು ಮಂಡಿಸಿ, ಪ್ರಥಮ ಬಹುಮಾನವನ್ನು ಪಡೆದಿರುತ್ತಾನೆ. ಇದು ನಡೆದದ್ದು ಕಣ್ಣಾನೂರಿನಲ್ಲಿ. ಪ್ರಸಕ್ತ "Industrial Structures" ವಿಭಾಗದಲ್ಲಿ ಸ್ನಾತಕೋತ್ತರ ಪದವಿಗೆ ವ್ಯಾಸಂಗ ಮಾಡುತ್ತಿದ್ದಾನೆ.

ತಂದೆ : **ಕೆ. ವಿ. ಧ್ರುವನಾರಾಯಣ್**

ಚಿ|| ಡಿ. ಹರ್ಷನನ್ನು ಸಂಘವು ಅಭಿನಂದಿಸುತ್ತದೆ.

## ಸಮಾಚಾರ ಸಂಗ್ರಹ

ಇಂಕು : ಸರ್ಕಾರಿ ಅಧಿಕಾರಿಗಳು ಮಂಕು ! (07, ಅಕ್ಟೋಬರ್ 04; ಪಿಟಿಐ) ದೆಹಲಿ : Think before you ink ಎನ್ನುವ ಜಾಣತನದ ಮಾತಿದೆ. ಆದರೆ ಯಾವ ಇಂಕನ್ನು ಬರೆಯಲು ಬಳಸಬೇಕೆಂದು ಸರ್ಕಾರಿ ಅಧಿಕಾರಿಗಳಿಗೆ ಸಾಧ್ಯವಾಗಿಲ್ಲದೆ ಇರುವುದು ನಮ್ಮ ಆಡಳಿತ ವ್ಯವಸ್ಥೆ ಯಾವ ಮಟ್ಟದಲ್ಲಿದೆ ಎಂದು ತೋರಿಸುತ್ತದೆ. ಅಧಿಕಾರಿಗಳು File-papers ಮೇಲೆ ಕೆಂಪು ಇಂಕ್‌ನ penನಲ್ಲಿ ಷರಾ ಬರೆಯಬೇಕೋ ಅಥವಾ ಕಪ್ಪು ಇಂಕ್‌ನ penನಲ್ಲಿ ಬರೆಯಬೇಕೋ ಎನ್ನುವುದನ್ನು ಇನ್ನೂ ತೀರ್ಮಾನ ಮಾಡಿಲ್ಲ. 1999ರ ಜನವರಿಯಲ್ಲಿ ಕೇಂದ್ರ ಕಬ್ಬಿಣ- ಉಕ್ಕು ಇಲಾಖೆಯ ಕಛೇರಿಯ ಹಿರಿಯ ಅಧಿಕಾರಿಗಳು ಅಧಿಕೃತ ಫೈಲಿನ ಮೇಲೆ ಷರಾ ಬರೆದಿದ್ದರು. ಆ ಫೈಲು ಮತ್ತೊಂದು ಟೇಬಲ್‌ಗೆ ಹೋಯಿತು. ಆ ಪೇಪರ್‌ನಲ್ಲಿ ಒಬ್ಬರು ಕೆಂಪು, ಮತ್ತೊಬ್ಬರು ನೀಲಿ inkನಲ್ಲಿ sign ಮಾಡಿದ್ದರು. ಇದನ್ನು ನೋಡಿದ ಅಧಿಕಾರಿಯೊಬ್ಬ ತನ್ನ ಸಂದೇಹ ನಿವಾರಣೆಗಾಗಿ ಆಡಳಿತಾತ್ಮಕ ಸುಧಾರಣಾ ಇಲಾಖೆಗೆ ಪತ್ರ ಬರೆದ. (ಈ ಎರಡೂ ಇಲಾಖೆಗಳ ಕಟ್ಟಡಗಳು ಅಕ್ಕಪಕ್ಕದಲ್ಲಿಯೇ ಇದ್ದರೂ ಪತ್ರ ತಲುಪಲು 6 ದಿನ ಆಯಿತು!) ತಕ್ಷಣ ಮೀಟಿಂಗ್ ಕರೆಯಲಾಯಿತು. ಯಾವ ತೀರ್ಮಾನಕ್ಕೂ ಬರಲಾರದೆ ಮುಂದಿನ ವಾರಕ್ಕೆ ಮುಂದೂಡಲಾಯಿತು. ಆ ಮೀಟಿಂಗ್‌ನಲ್ಲಿ ಇದು inkಗೆ ಸಂಬಂಧಿಸಿದ ವಿಷಯವಾಗಿರುವುದರಿಂದ ಮುದ್ರಣ ವಿಭಾಗದ ನಿರ್ದೇಶನಾಲಯದ ಮಾರ್ಗದರ್ಶನ ಪಡೆಯಬೇಕು ಎಂದು ತೀರ್ಮಾನಕ್ಕೆ ಬರಲಾಯಿತು. ಮುದ್ರಣ ನಿರ್ದೇಶನಾಲಯದ ಅಧಿಕಾರಿಗಳು 3 ಮೇ 99ರಂದು ಈ ಪತ್ರವನ್ನು ಪಡೆದರು. ಮೇಜುಗಳಲ್ಲಿ ಕತ್ತಲಲ್ಲಿ ಭದ್ರವಾಗಿದ್ದ Rules-books ಈಚೆಗೆ ಬಂದವು. ಎಲ್ಲರೂ ಅವುಗಳನ್ನು ತಡಕಾಡಿದರು. 3 ವಾರಗಳು ಕಳೆದವು. ಯಾವ ರೀತಿಯ ಸಮಾಧಾನಕರವಾದ ತೀರ್ಮಾನಕ್ಕೆ ಬರಲು ಸಾಧ್ಯವಾಗದೇ ಇದ್ದುದರಿಂದ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಗೃಹ ಇಲಾಖೆಯ ಅಧೀನದಲ್ಲಿರುವ ಸಿಬ್ಬಂದಿ-ತರಬೇತಿ ವಿಭಾಗಕ್ಕೆ ಪತ್ರ ಬರೆಯಲು ಮುದ್ರಣ ಇಲಾಖೆಯ ನಿರ್ದೇಶನಾಲಯ ತೀರ್ಮಾನಿಸಿತು. 6 ಜುಲೈ 99ರಂದು ಗೃಹ ಇಲಾಖೆಯ ಸಿಬ್ಬಂದಿ-ತರಬೇತಿ ವಿಭಾಗದ ಅಧಿಕಾರಿಗಳ ಸಲಹೆಯನ್ನು ಕೋರಿ ಆಡಳಿತ ಸುಧಾರಣಾ ಇಲಾಖೆಗೆ ಪತ್ರ ಬರೆದರು! ಆಗ ಪುನಃ ಆಡಳಿತ ಸುಧಾರಣಾ ಅಧಿಕಾರಿಗಳು ಮೀಟಿಂಗ್ ಕರೆದರು. ''ಯಾವ inkನಲ್ಲಿ ಬರೆಯಬೇಕು ಎನ್ನುವುದನ್ನು paperನಲ್ಲಿರುವ subjectನ ಮಹತ್ವವನ್ನು ಆಧರಿಸಿರುತ್ತದೆ. ಕೆಲವು ಫೈಲುಗಳನ್ನು ಶಾಶ್ವತವಾಗಿಡಬೇಕಾಗುತ್ತದೆ. ಇಂತಹ ಸಂದರ್ಭದಲ್ಲಿ sign ಮಾಡಿದ ink ಅಳಿಸಿ ಹೋಗಲೇಬಾರದು. ಆದುದರಿಂದ ಈ ವಿಚಾರಕ್ಕೆ ಸಂಬಂಧಿಸಿದಂತೆ ಇನ್ನಷ್ಟು ಚರ್ಚೆ





ಮಾಡಬೇಕಾಗುತ್ತದೆ'' ಎಂದು ತೀರ್ಮಾನಕ್ಕೆ ಬಂದರು. ಮುಂದಿನ ವಾರದ ಮೀಟಿಂಗ್‌ನಲ್ಲಿ ಆಡಳಿತ ಸುಧಾರಣಾ ಅಧಿಕಾರಿಗಳ ಜೊತೆ ಕೆಲವು ಪರಿಣತರನ್ನೂ ಕರೆದು ಕೂರಿಸಲಾಗಿತ್ತು. ''ಫೈಲಿನ ಮಹತ್ವವನ್ನು ನೋಡಿ Ball-penನಲ್ಲಿ sign ಮಾಡಬೇಕೋ, ink-penನಲ್ಲಿ sign ಮಾಡಬೇಕೋ ಎನ್ನುವುದನ್ನು ತೀರ್ಮಾನಿಸಬೇಕು. ಫೈಲಿನ ರಕ್ಷಣೆಯ ವಿಚಾರವು ಪ್ರಮುಖ ಅಂಶವಾಗಿರುವುದರಿಂದ ಸರ್ಕಾರಿ- ದಾಖಲೆಗಳನ್ನು ಕಾಪಾಡುತ್ತಿರುವ ರಾಷ್ಟ್ರೀಯ ಪತ್ರಾಗಾರದ ಸಲಹೆ ಪಡೆಯಬೇಕು'' ಎಂದು ತೀರ್ಮಾನಿಸಿತು. ಈ ತೀರ್ಮಾನದ ಪತ್ರವು 12 ಆಗಸ್ಟ್ 99ರಂದು ರಾಷ್ಟ್ರೀಯ ಪತ್ರಾಗಾರದ ನಿರ್ದೇಶಕರಿಗೆ ತಲುಪಿತು. ಆ ಇಲಾಖೆಯು ನಡೆಸಿದ ಮೀಟಿಂಗ್‌ನಲ್ಲಿ ''Ball-pen ಅಥವಾ ink-penನಲ್ಲಿ ಬರೆಯಬಹುದು. ಆದರೆ ಆ inkಗೆ ISI mark ಗ್ಯಾರಂಟಿ ಇರಬೇಕಾಗುತ್ತದೆ'' ಎಂದು ತೀರ್ಮಾನಕ್ಕೆ ಬರಲಾಯಿತು. ಆದರೆ ''ಫೈಲುಗಳನ್ನು ಶಾಶ್ವತವಾಗಿಡುವುದಕ್ಕೂ, ink-colourಗೂ ಸಂಬಂಧವಿಲ್ಲ'' ಎಂದೂ ಹೇಳಿತು. ಈ ಪತ್ರಕ್ಕೆ ಸಂಬಂಧಿಸಿದ ವಿಚಾರ ವಿನಿಮಯಕ್ಕಾಗಿ ಆಡಳಿತ ಸುಧಾರಣಾ ಇಲಾಖೆಯ ಅಧಿಕಾರಿಗಳು ಮತ್ತೆ ಮೀಟಿಂಗ್ ಕರೆದರು. ಇದಕ್ಕೆ ಸಂಬಂಧಿಸಿದಂತೆ ಅಂತಿಮ ತೀರ್ಮಾನಕ್ಕೆ ಬರುವ ಮೊದಲು ರಕ್ಷಣಾ ಇಲಾಖೆಯ ಮಾರ್ಗದರ್ಶನ ಪಡೆಯಬೇಕೆಂದು ತೀರ್ಮಾನಿಸಿತು. ''ಏಕೆಂದರೆ ಮಹಾದಂಡ ನಾಯಕರು ಕೆಂಪು ink ನಲ್ಲಿಯೂ, ಇತರ ಅಧಿಕಾರಿಗಳು ಕಪ್ಪು inkನಲ್ಲಿಯೂ sign ಮಾಡುತ್ತಿರುವುದೇ ಇದಕ್ಕೆ ಕಾರಣ.'' ಇದಾದನಂತರ 15 ಸಲ ಮೀಟಿಂಗುಗಳು ನಡೆದವು. ಕಡೆಗೆ ಆಡಳಿತ ಸುಧಾರಣಾ ಇಲಾಖೆಯು 5 ಏಪ್ರಿಲ್ 99ರಂದು ಕಬ್ಬಿಣ- ಉಕ್ಕು ಇಲಾಖೆಯ ಕಛೇರಿಗೆ ಒಂದು ಪತ್ರ ಬರೆಯಿತು. ''ಕಪ್ಪು ಅಥವಾ ನೀಲಿ inkಅನ್ನು ಎಲ್ಲಾ ಸಿಬ್ಬಂದಿ ಹಾಗೂ ಅಧಿಕಾರಿಗಳು ಬಳಸಬಹುದು. ಆದರೆ ಅಪರೂಪದ ಸನ್ನಿವೇಶಗಳಲ್ಲಿ ಕೇಂದ್ರ ಸರ್ಕಾರದ ಜಾಯಿಂಟ್-ಸೆಕ್ರೆಟರಿ ಹಾಗೂ ಮೇಲಿನ ಅಧಿಕಾರಿಗಳು ಹಸಿರು ಅಥವಾ ಕೆಂಪು inkನಲ್ಲಿ sign ಮಾಡಬಹುದು. ಕರಡು ಪ್ರತಿ ಕಪ್ಪು ಅಥವಾ ನೀಲಿ ink ನಲ್ಲಿರಬಹುದು. ಯಾವುದೇ ತಿದ್ದುಪಡಿಯ note ಮಾಡುವಾಗ ಹಸಿರು ಅಥವಾ ಕೆಂಪು ink ಬಳಸಬಹುದಾಗಿದೆ. ಇದರಿಂದ ತಿದ್ದುಪಡಿ ಮಾಡಿರುವುದು ಗೊತ್ತಾಗುತ್ತದೆ''. ಸುಮಾರು ನೂರಕ್ಕೂ ಹೆಚ್ಚು ಅಧಿಕಾರಿಗಳು (IAS ಅಧಿಕಾರಿಗಳೂ ಸೇರಿ) ಒಂದೂವರೆ ವರ್ಷಗಳ ಕಾಲ ಸಭೆ-ಸಮಾಲೋಚನೆಗಳನ್ನು ಮಾಡಿ ಯಾವ colour inkನಲ್ಲಿ sign ಮಾಡಬೇಕೆಂದು ತೆಗೆದುಕೊಂಡ ತೀರ್ಮಾನ ಇದು! ನಮ್ಮ ಅಧಿಕಾರಿಗಳು ನಮ್ಮ ಸರ್ಕಾರ ಹೇಗೆ ಕೆಲಸ ಮಾಡುತ್ತವೆ ನೋಡಿ! ಸರ್ಕಾರವೆಂಬ ದಪ್ಪ ಚರ್ಮದ ಪ್ರಾಣಿ ಕೆಲಸ ಮಾಡುವುದೇ ಹೀಗೆ, ಇಷ್ಟು ವರ್ಷ ಮಾಡಿರುವುದೂ ಹೀಗೆ, ಮುಂದೆ ಮಾಡುವುದೂ ಹೀಗೆ !

- ಬಿ. ಎಸ್. ಸತೀಶ್

## POINT TO PONDER

In the tranquil atmosphere of Sri Subramanya temple in Subramanyapura, my friend Gopal and myself sat for a long while silently. My mind roved over all the unpleasant things that had happened in my life of 70 years. Certain unimaginable thoughts about God crossed my mind and my grievance against God. God is like the father authoritative, tyrannical and rarely beneficial. He holds us responsible for our mistakes, God judges us by how we interpret His laws. He is the Monarch of the whole Universe and we human beings are His subjects. We are made to feel that we are untrustworthy by God.' We develope an attitude of separateness from God who is the boss. So we plan to create some ways to please this Boss and gain the feeling of being worthy. We adopt the strategy of praising Him, offering Him poojas, homas, fastings etc. We subject ourselves to doubt when God is vindictive. This again causes doubts and confusions about our own feelings, opinions and beliefs whether we are really untrustworthy. This state of confusion makes us incapable of maintaining trust in God which by itself is an act of committing sin.

As I narrated this to my friend Gopal, he calmly said, "Dear Doctor, your imagination is running; wild!. Now listen God is not a punishing boss but One who is always a loving mother. The human beings are a part of God and therefore a trusted part of our nature. We too carry divinity





which is both inside and outside us. So remember serving God is nothing but serving others. As a medical man you have been doing this service to the ailing humanity. That is in other words serving God. We are like waves in a sea God is the sea and we are the waves. However much high the waves may dash still they go back to merge with the ocean. There is no sin or virtue, these are our own making. The compassionate God will be just Indulgent at our actions just as the sea is calm at the waves. Just relax and feel secure God is ever present within yourself. Now cheer up, let us have one more darsan of the Lord and start home!"

His speech made an impression on me and ever since I have stopped brooding over my misfortunes.

Let us ponder on this point.

**- Dr. S. Mohan Ram**

***********

## ಶ್ರದ್ಧಾಂಜಲಿ

25.10.04 **ಶ್ರೀ ಬಿ. ಎನ್. ಸುಬ್ರಾಯ, 85 ವರ್ಷ,**

ಮೈಸೂರು ಭಾರದ್ವಾಜ ಗೋತ್ರ

ಮೃತರ ಆತ್ಮಕ್ಕೆ ಶಾಂತಿಯನ್ನು ಕೋರುತ್ತಾ ಅವರ ಕುಟುಂಬ ವರ್ಗದವರಿಗೆ ಈ ದುಃಖವನ್ನು ಭರಿಸಲು ಧೈರ್ಯ, ಸ್ಥೈರ್ಯಗಳನ್ನು ಭಗವಂತನು ಅನುಗ್ರಹಿಸಲಿ ಎಂದು ಪ್ರಾರ್ಥಿಸುತ್ತೇವೆ.

# SATYAM VADA

(Contd. from last month)

The power of truth is demonstrated through the words of Mahatmas. Have we not heard of instances when people with afflictions or bodily problems approach mahatmas to seek relief and remedy? We have heard of people going to, say Swami Chandra Shekara Bharati of Sringeri Mutt and seek relief from, say, severe chronic stomach ache or delay in getting daughter married etc and the swamiji blesses them and asks them todo some Puja or Japa of Gayatri mantra or Vishnu Sahasranama etc for a certain number of days / times. The person does as he is told and he gets the relief sought. How does it happen? Is it a miracle? Knowledgeable people say such is the power of truth and righteous living. Mahatmas have scrupulously adhered to the value of truth all their lives. Events have happened and their words, regarding and following such events, have been truthful. Later, when such mahatmas speak some words, future events follow such words! Earlier, their words followed events. Later, events follow such words! Such is the power of truth and right living. I know personally of one such instance. Some one I knew closely sought Swami Chandra Shekara Bharati's blessings for a son as he did not have children for a long time. Swamiji blessed him and, sure enough, a son was born within 12-15 months! There have been





numerous such instances. As another example, we have heard of Saint Gyaneshwar, one of the most famous Maharastrian Saints. His birth is also due to blessings of a swamiji. It is said that a certain gentleman, left his wife in a village and proceeded to Benaras or so and became a disciple of a mahatma and became a sanyasi. It so happened that this mahatma came to the same village along with his disciples, after some time. It also so happened that this mahatma blessed a lady to have, children and this lady happened to tell him that her former husband was now a sanyasi with him. With this revelation, the mahatma commanded him to re-enter householder's life with his former wife and he obeyed and they were blessed with four sons one of whom was Saint - Gyaneshwar- 'such is the power of words of mahatmas, or could it be that mahatmas know the future events and bless accordingly?

Satya is one of the divya namas in Vishnu Sahasranama. Satya is God and God is Truth. By not telling the truth,man is untrue to himself and is also dishonouring God. When we speak of Truth, how can we not remember Satya Harishchandra? Can any of us withstand even a part of the most rigorous tests and trials he was put to? He steadfastly adhered to the value of truth irrespective of the terrible hardships he had to face. That he had to face all this for no fault of his, but as a victim of

the dispute/or argument between sage Vasista and sage Viswamitra makes his role shine all the brighter.

Can we see the value of truth and the importance of avoiding even harmless and unintentional lies out of inadvertance or in fun and more importantly, of ensuring that all that we speak is not only truthful but also beneficial and pleasant to the hearer Speaking the truth can be considered as the first step in spiritual sadhana leading to antaha karana shudhi, without which no spiritual progress is possible. Wisemen say “Dharma (if) protected, protects”. Likewise, “Truth (if) protected, protects (you)”. May we remember this?

Lt.Col.B.V.S. Rao (Retd.)
Tel : 25282899

---

**ವಧು ಬೇಕಾಗಿದೆ**

**ವರನ ವಿವರ**

ಗೋತ್ರ : ಭಾರದ್ವಾಜ

ಎತ್ತರ : 5’8$^{1}/_{2}$’’

ವಿದ್ಯಾರ್ಹತೆ : M.B.B.S. (Now in England doing MRCP)

ಅಪೇಕ್ಷೆ : Any Degree from a good family

ಸಂಪರ್ಕಿಸಿ : 26571327





# A Bitter Buffet

Not long ago, I was invited to attend a wedding reception, followed by dinner. I accepted the invitation not without some trepidation. Rummaging my ward robe, I selected a set of spotless white clothes for the occasion and soon found myself ensconced in the wedding hall.

The aroma of the goodies that were stacked on the catering tables wafted in the air, making the salivary glands over active. No sooner dinner was announced than the guests, behaved like a pack of hungry wolves. Everybody stormed towards the catering tables to grab the food. Did they fear that there will be shortage of food? No, this is our trait. Whether it is for getting into a city bus, or for purchasing tickets for a cinema show or a cricket match, or to get a glimpse of a deity in a temple, there will be scramble and chaos. Such bedlam scenes are too familiar to us Do we not see such scenes in our august State assemblies and Parliament when our revered representatives rush to the well of the House? After some semblance of order was restored, I took a plate and filled it with the delicacies that I liked. A buffet party does not only ensure wastage of food to the minimum but provides facilities for the invitees to mingle amongst their friends, exchange notes with them. My brain is not programmed

to do more than one thing at a time. I cannot hold a food laden plate in one hand, eat with the other and do the talking in between all the time. So, I was searching for a quiet corner to sit and start operation eating to fill the pit in the stomach without being disturbed. Holding the loaded plate securely, I was moving tardily, lest I collide head on with somebody or the other. To my predicament the very thing that I wanted to avoid, happened. I was jostled by somebody, which disturbed the equilibrium, the result of which proved disastrous. The contents of the plate found my clothes a better place to rest on, than my hungry tummy. What with the array of colours splashed on my spotlessly white apparel, I looked like a victim of Holi revelry. The marketers of detergents would have been mightily pleased to shoot me in that state, for publicizing their product over the TV. To rub salt to the wound, young boys and girls started giggling at the comic situation they found me in.

Needless to say, I lost all interest in the food and sped to my place incognito in double quick time. Squatting on the floor, I then helped myself in my dear house with a hearty meal consisting of steaming rice and curds, laced with lemon pickle, served on a fresh plantain leaf. What else does a man require to survive?

*By **R. G. Subramanyam***





## ಸಾಂಸ್ಕೃತಿಕ ರಸಪ್ರಶ್ನೆ

**ಡಾ|| ಎಚ್.ವಿ. ನರಸಿಂಹ ಮೂರ್ತಿ,**
**ಕುಂದಾಪುರ**

1. ಸೂರ್ಯನ ರಥದಲ್ಲಿ ಎಷ್ಟು ಕುದುರೆಗಳಿವೆ ?
2. ಚಂದ್ರನ ತಂದೆ ಯಾರು ?
3. ಋಗ್ವೇದವು ಯಾವ ವಾಕ್ಯದಿಂದ ಪ್ರಾರಂಭವಾಗುತ್ತದೆ ?
4. ಸೂರ್ಯನಿಗೆ ಪ್ರಿಯವಾದ ಧಾನ್ಯವು ಯಾವುದು ?
5. ಗಾಯತ್ರೀ ಮಂತ್ರದಲ್ಲಿ ಎಷ್ಟು ಅಕ್ಷರಗಳಿವೆ ?
6. ಸೂರ್ಯನಿಗೆ ಪ್ರಿಯವಾದ ಸಮಿಧೆ ಯಾವುದು ?
7. ವಾಲ್ಮೀಕಿ ಮಹರ್ಷಿಗಳ ಆಶ್ರಮದ ಬಳಿ ಹರಿಯುತ್ತಿದ್ದ ನದಿ ಯಾವುದು ?
8. ಕುಬೇರನ ರಾಜಧಾನಿ ಯಾವುದು ?
9. ಶನಿಯ ವಾಹನ ಯಾವುದು ?
10. ಮಧುರೆ ಕ್ಷೇತ್ರದ ಅಧಿದೇವತೆ ಯಾರು ?
11. 'ಹೊರನಾಡು' ಕ್ಷೇತ್ರ ಯಾವ ಜಿಲ್ಲೆಯಲ್ಲಿದೆ ?
12. ಶೃಂಗೇರಿ ಕ್ಷೇತ್ರದಲ್ಲಿ ಹರಿಯುವ ನದಿ ಯಾವುದು ?
13. ವಾಯುವಿನ ರಾಜಧಾನಿ ಯಾವುದು ?
14. ಕೋಣಾರ್ಕದಲ್ಲಿರುವ ಪ್ರಸಿದ್ಧ ದೇವಾಲಯ ಯಾವುದು ?
15. ಗಾಂಧಾರ ದೇಶದ ರಾಜಧಾನಿ ಯಾವುದು ?
16. ಬ್ರಹ್ಮದೇವನಿಗೆ ಎಷ್ಟು ಮುಖಗಳಿವೆ ?
17. ಸರಸ್ವತಿಯ ವಾಹನ ಯಾವುದು ?
18. ಸಂಪತ್ತಿನ ಅಧಿದೇವತೆ ಯಾರು ?
19. ಯಮನ ರಾಜಧಾನಿ ಯಾವುದು ?
20. ಸೂರತ್ ಯಾವ ರಾಜ್ಯದಲ್ಲಿದೆ ?

**ಸಾಂಸ್ಕೃತಿಕ ರಸಪ್ರಶ್ನೆಯ ಉತ್ತರಗಳು :**

1. ಏಳು; 2. ಅತ್ರಿ ಮಹರ್ಷಿ; 3. ಅಗ್ನಿ ಮೀಳೇ ಪುರೋಹಿತಂ; 4. ಗೋಧಿ; 5. ಇಪ್ಪತ್ತನಾಲ್ಕು; 6. ಎಕ್ಕ (ಅರ್ಕ); 7. ತಮಸಾ; 8. ಅಲಕಾವತಿ; 9. ಕಾಗೆ; 10. ಮೀನಾಕ್ಷಿ; 11. ಚಿಕ್ಕಮಗಳೂರು; 12. ತುಂಗಾ; 13. ಗಂಧವತೀ ನಗರ; 14. ಸೂರ್ಯ ದೇವಾಲಯ; 15. ಪುರುಷಪುರ (ಪೇಶಾವರ); 16. ನಾಲ್ಕು; 17. ಹಂಸ; 18. ಲಕ್ಷ್ಮೀ; 19. ಸಂಯಮನೀ ನಗರ; 20. ಗುಜರಾತ್ ರಾಜ್ಯದಲ್ಲಿ

# ಕಾಶೀಯಾತ್ರೆ - ಮತ್ತೂರು ಕೃಷ್ಣಮೂರ್ತಿಗಳೊಂದಿಗೆ

...... ಕಳೆದ ಸಂಚಿಕೆಯಿಂದ

ಈ ಕಡೆ ಬ್ರಹ್ಮ ದೇವನು ತಾನು ಮಾಡುತ್ತಿದ್ದ ಯಜ್ಞವನ್ನು ಪೂರ್ಣ ಮುಗಿಸಿದ ಮೇಲೆ, ತನ್ನ ಮಾನಸ ಪುತ್ರರೆನಿಸಿದ್ದ, ಅರ್ಥಾತ್ ಯಜ್ಞದ ಕಾರ್ಯಕ್ಕಾಗಿ ಸೃಷ್ಟಿಸಲ್ಪಟ್ಟಿದ್ದ ಬ್ರಾಹ್ಮಣರನ್ನು ಉದ್ದೇಶಿಸಿ ವಿಷ್ಣು ಈ ರೀತಿ ಹೇಳುತ್ತಾನೆ. ಈ ಕ್ಷೇತ್ರ ಧನ ಸಂಪತ್ತಿನಿಂದ ತುಂಬಿರುವ ಯಾತ್ರಾ ಸ್ಥಳವಾಗಿದೆ. ಹಾಲು, ಮೊಸರು, ತುಪ್ಪ ಇವುಗಳ ನದಿಯೇ ಹರಿಯುತ್ತಿದೆ. ಇಲ್ಲಿ ಬಂಗಾರ ಬೆಳ್ಳಿಗಳ ಪರ್ವತವೇ ಇದೆ. ಇಂಥ ಅಸದೃಶ ಸಂಪತ್ತಿಗೆ ನೀವೇ ಒಡೆಯರು, ಯಾವುದೇ ಯಜ್ಞ ನಿಮಿತ್ತದಿಂದ ನೀವು ದಾನವನ್ನು ತೆಗೆದುಕೊಳ್ಳಬಾರದೆಂದು ಎಚ್ಚರಿಸಿ ತಾನು ಸೃಷ್ಟಿಸಿದ ಬ್ರಾಹ್ಮಣರಿಗೆ ಈ ರೀತಿ ಆಜ್ಞಾಪಿಸಿ ವಿಷ್ಣುವು ಅಂತರ್ಧಾನನಾಗುತ್ತಾನೆ.

ಕೆಲವು ವರ್ಷಗಳ ನಂತರ ಧರ್ಮರಾಜನು ಒಂದು ಯಜ್ಞವನ್ನು ಮಾಡಿ, ಯಜ್ಞದ ಪೂರ್ಣಫಲ ಸಿಕ್ಕುವುದಕ್ಕೋಸ್ಕರ ಬ್ರಾಹ್ಮಣರಿಗೆ ಬಂಗಾರವನ್ನು ದಾನ ಮಾಡಿದನು. ಬ್ರಹ್ಮನಿಂದ ಸೃಷ್ಟಿಸಲ್ಪಟ್ಟ ಈ ಬ್ರಾಹ್ಮಣರು ಅಜ್ಞಾನದಿಂದ ಈ ಹಿಂದೆ ಬ್ರಹ್ಮನಿಗೆ ತಾವು ಕೊಟ್ಟ ಮಾತನ್ನು ಮರೆತು ಆಸೆಯಿಂದ ದಾನವನ್ನು ಸ್ವೀಕರಿಸುತ್ತಾರೆ. ದಾನಕ್ಕಾಗಿ ಕೈಚಾಚಿದ ಬ್ರಾಹ್ಮಣರ ಮೇಲೆ ಕೋಪಗೊಂಡ ಬ್ರಹ್ಮನು, ನೀವೆಲ್ಲಾ ದರಿದ್ರರಾಗಿರಿ ಎಂದು ಅವರಿಗೆ ಶಾಪವನ್ನು ಕೊಡುತ್ತಾನೆ. ಈ ಶಾಪದ ತಾಪದಿಂದ ಬಂಗಾರದ ಪರ್ವತಗಳೆಲ್ಲವೂ ಶಿಲಾರೂಪ ಪರ್ವತಗಳಾಗಿ ಮಾರ್ಪಡುತ್ತವೆ. ತಮ್ಮ ತಪ್ಪು ಅರಿವಾದ ನಂತರ ಈ ಬ್ರಾಹ್ಮಣರು ತಾವು ಮಾಡಿದ ತಪ್ಪಿಗೆ ಪಶ್ಚಾತ್ತಾಪವನ್ನು ವ್ಯಕ್ತಪಡಿಸಿ ಬ್ರಹ್ಮನನ್ನು ಪ್ರಾರ್ಥಿಸುತ್ತಾರೆ. ಆಗ ಬ್ರಹ್ಮನು ಈ ಬ್ರಾಹ್ಮಣರ ಮೇಲೆ ಕೃಪೆದೋರಿ, ಈ ತೀರ್ಥ ಕ್ಷೇತ್ರದಲ್ಲಿ ಪಿತೃ ಯಜ್ಞಾದಿಗಳು ನಡೆಯುತ್ತವೆ. ಬ್ರಾಹ್ಮಣರಾದ ನೀವು ಸಂತೃಪ್ತಿಪಡಬೇಕು. ಪಿತೃಕಾರ್ಯ ಮಾಡುವವರು ನಿಮ್ಮನ್ನು ಗೌರವದಿಂದ ಕಾಣಬೇಕು. ಹಾಗೆ ಮಾಡಿದರೆ ಮಾತ್ರ ಪಿತೃ ದೇವತೆಗಳು ಸಂತುಷ್ಟರಾಗುತ್ತಾರೆ. ದಾನ ಮಾಡುವವರು ದಾನವನ್ನು ತೆಗೆದುಕೊಂಡವರು, ಅವರ ಪಿತೃಗಳ ಮುಕ್ತಿಗಾಗಿ ಶ್ರಾದ್ಧಮಾಡಿ ತೃಪ್ತರಾಗುತ್ತಾರೆ. ಈ ರೀತಿಯಿಂದ ನಿಮಗೆ ಜೀವನವೂ ಆಗುತ್ತದೆ ಎಂದು ಹೇಳಿ ವರವನ್ನು ಕೊಟ್ಟು ಬ್ರಹ್ಮನು ಅಂತರ್ಧಾನನಾಗುತ್ತಾನೆ. ಈ ಕಥೆಯನ್ನು 'ಗಯಾದ ಬ್ರಾಹ್ಮಣ ಕಥೆ' ಎನ್ನುತ್ತಾರೆ. ಯಾವಾಗ ಗಯಾಸುರನ ಮೇಲೆ ಗದಾಧರ ಬಂದು ನಿಂತನೋ ಆಗ ಬ್ರಹ್ಮದೇವರು ದೇವತೆಗಳು ವಿಷ್ಣುವನ್ನು ಪ್ರಾರ್ಥಿಸಿ ಇನ್ನು ಮುಂದೆ ಇಲ್ಲೇ ಇರಬೇಕೆಂದು ಕೇಳಿಕೊಳ್ಳುತ್ತಾರೆ. ಆಗ ಯಾವ ಮನುಷ್ಯನು ತನ್ನ ಪಿತೃಗಳನ್ನು ಉದ್ದೇಶಿಸಿ ಶ್ರಾದ್ಧ ಪಿಂಡ





ದಾನಾದಿಗಳನ್ನು ಇಲ್ಲಿ ಬಂದು ಮಾಡುತ್ತಾನೋ, ಅವರ ಕುಲ ಉದ್ಧಾರವಾಗುತ್ತದೆ. ಅಲ್ಲದೆ ಏಳು ಕುಲಗಳು ಉದ್ಧಾರವಾಗುತ್ತದೆ. ಈ ಪುಣ್ಯ ಭೂಮಿಯ ಮೇಲೆ ಯಾವ ವ್ಯಕ್ತಿ ತಿಲಯುಕ್ತ ಪಿಂಡದಾನ ಮಾಡುವನೋ ಅವನ ಪಿತೃಗಳು ಶಾಶ್ವತ ಬ್ರಹ್ಮಲೋಕಕ್ಕೆ ಸೇರುತ್ತಾರೆ. ಕಪ್ಪು ಎಳ್ಳಿನಿಂದ ತರ್ಪಣ ಕೊಡುವುದರಿಂದ ರಾಕ್ಷಸರ ಬಾಧೆ ಇರುವುದಿಲ್ಲ. ಗಯಾ ಕ್ಷೇತ್ರದಲ್ಲಿ ಪಿಂಡದಾನ ಮಾಡುವುದರಿಂದ ಅಶ್ವಮೇಧ ಯಜ್ಞದ ಫಲ ಪ್ರಾಪ್ತವಾಗುತ್ತದೆ. ಈ ಕ್ಷೇತ್ರದಲ್ಲಿ ಮಹಾಲಯದಲ್ಲಿ ಪಿಂಡದಾನ ಮಾಡುವುದರಿಂದ ಮಹಾಫಲ ಪ್ರಾಪ್ತವಾಗುತ್ತದೆ. ಪಿಂಡದಾನದ ನಿಮಿತ್ತ ಧನಧಾನ್ಯ ಪುತ್ರ ಪೌತ್ರ ಸಂಪತ್ತು ಅಭಿವೃದ್ಧಿಯಾಗುತ್ತದೆ ಎಂದು ಗದಾಧರ ರೂಪಿಯಾದ ಮಹಾವಿಷ್ಣು ತಿಳಿಸುತ್ತಾನೆ. ಈ ಕ್ಷೇತ್ರದಲ್ಲಿ ಮಹರ್ಷಿ ಮರೀಚಿಗಳು ಯಜ್ಞ ಮಾಡಿದ್ದಾರೆ. ವಿಷ್ಣುಪಾದದ ವಿವರಣೆಯನ್ನು ನೋಡೋಣ. ಚೌಕಾಕಾರದ ಕಲ್ಲಿನ ತೊಟ್ಟಿಯಲ್ಲಿ ವಿಷ್ಣುಪಾದದ ಗುರುತನ್ನು ಕಾಣಬಹುದು. ಈ ವಿಷ್ಣುಪಾದದ ಮೇಲೆ ಎಲ್ಲಾ ಹಿಂದೂಗಳು ಶ್ರಾದ್ಧ ಮಾಡಿದ ಪಿಂಡಗಳ ರಾಶಿಯನ್ನು ನೋಡಬಹುದು. ಆಗಾಗ ಇಲ್ಲಿಯ ಸಿಬ್ಬಂದಿಗಳು ವಿಷ್ಣುಪಾದದ ಮೇಲೆ ಹಾಕಿದ ಪಿಂಡಗಳ ರಾಶಿಯನ್ನು ಗುಡಿಸಿ ಹೊರಹಾಕುತ್ತಾರೆ. ನೀರಿನಲ್ಲಿ ತೊಳೆಯುತ್ತಿರುತ್ತಾರೆ. ಪುನಃ ಭಕ್ತಾದಿಗಳು ಪಾದದ ಮೇಲೆ ಪಿಂಡಗಳನ್ನು ಹಾಕಿ ನಮಸ್ಕರಿಸುತ್ತಾರೆ. ಸಾಯಂಕಾಲದವರೆಗೆ ಈ ಪ್ರಕ್ರಿಯೇ ನಡೆಯುತ್ತಿರುತ್ತದೆ. ಈ ವಿಷ್ಣುಪಾದವನ್ನು ಮುಟ್ಟಿ ನಮಸ್ಕರಿಸಬಹುದು. ಇದಕ್ಕೆ ಬೆಳ್ಳಿಯ ಕವಚವಿದೆ. ಭಕ್ತರು ಪಾದದ ಮೇಲೆ ಹಾಲನ್ನು ತಂದು ಹಾಕುತ್ತಾರೆ. ಅನಂತರ ಪ್ರೋಕ್ಷಣೆ ಮಾಡಿಕೊಂಡು ಹೋಗುತ್ತಾರೆ.

ಒಂದು ಗೋಲಾಕಾರದ ಗುಂಬಜ್ ರೀತಿಯಲ್ಲಿರುವ ಗೋಪುರವನ್ನು ನೋಡಬಹುದು. ಇನ್ನೊಂದು ನೀಳವಾದ ಗೋಪುರ. ಇದು ಅಂಟಿಕೊಂಡಂತೆ ಕಾಣುತ್ತದೆ. ವಿಷ್ಣುಪಾದದ ಉದ್ದ 40 ಸೆಂ.ಮೀ. ಧರ್ಮಶಿಲೆಯ ಮೇಲೆ ಗದಾಧರರೂಪಿಯಾದ ವಿಷ್ಣುವು ತನ್ನ ಒಂದು ಬಲಪಾದವನ್ನು ಇಟ್ಟಿದ್ದಾನೆ. ಇದರ ಸುತ್ತ ಬೆಳ್ಳಿಯ ಕವಚವನ್ನು ಹಾಕಿದ್ದಾರೆ. ಫಲ್ಗುಣಿ ನದಿ ತೀರದಲ್ಲಿರುವ ಈ ವಿಷ್ಣು ದೇವಸ್ಥಾನವನ್ನು 1787ರಲ್ಲಿ ಇಂದೂರಿನ ರಾಣಿ ಅಹಲ್ಯಾಬಾಯಿ ಕಟ್ಟಿಸಿದ್ದಾಳೆ. ಹಿಂದೂಗಳು ಅಲ್ಲದವರಿಗೆ ಈ ದೇವಾಲಯದಲ್ಲಿ ಪ್ರವೇಶವಿಲ್ಲ. ಇಲ್ಲಿಂದ 20 ಕಿ.ಮೀ. ದೂರದಲ್ಲಿ ಸೂರ್ಯ ದೇವಸ್ಥಾನವಿದೆ. ಪೂಜಾ ಸಂದರ್ಭದಲ್ಲಿ ಹೆಚ್ಚಿನ ಭಕ್ತರು ದೇವಾಲಯಕ್ಕೆ ಬರುತ್ತಾರೆ. ಇನ್ನು ನೋಡಬೇಕಾದ್ದು ಅಕ್ಷಯ ವಟವೃಕ್ಷ. ಇದನ್ನು ಈಗಾಗಲೇ ತಿಳಿಸಿದ್ದೇನೆ. ಅಲ್ಲದೆ ವಿರಾಟ ಹನುಮನ ದೇವಸ್ಥಾನ ಇದೆ. ಈ ದೇವಾಲಯ ಒಂದು ಹಜಾರದಂತೆ ಇದ್ದು ವಿಶೇಷತೆಯಿಂದ ಕೂಡಿದೆ. ಇಲ್ಲಿ ಕುಟುಂಬದಲ್ಲಿ ಪಿತೃಗಳಿಗೆ

ಮಾತ್ರ ಶ್ರಾದ್ಧ ಮಾಡಬೇಕೆಂದಿಲ್ಲ. ಎಲ್ಲಾ ವರ್ಗದ ಜನರೂ ಇದರಲ್ಲಿ ನಂಬಿಕೆ ಇರುವ ಯಾವುದೇ ಜನಾಂಗದವರೂ, ಅವರ ಬಂಧುಗಳಿಗಾಗಲೀ, ಗುರುಗಳು, ಶಿಷ್ಯರು, ದೊಡ್ಡವರು, ಚಿಕ್ಕವರು, ಗೆಳೆಯರು ದೂರದ ಸಂಬಂಧಿಗಳನ್ನು ತಿಳಿದ ಅನಾಥರು ಯಾರಿಗೇ ಆದರೂ ಅವರಿಗೆ ಮುಕ್ತಿ ಸಿಕ್ಕಲಿ ಎಂದು ಪ್ರಾರ್ಥನೆ ಶ್ರಾದ್ಧ ಮಾಡಬಹುದು. ಇದೇ ಈ ಕ್ಷೇತ್ರದ ಮಹತ್ವ. ಗಯಾದಲ್ಲಿ ವೇ|| ಶ್ರೀ|| ರಾಮಾಚಾರ್ಯರವರಲ್ಲಿ ವ್ಯವಹರಿಸಿದರೆ ಎಲ್ಲಾ ಏರ್ಪಾಡುಗಳನ್ನು ಮಾಡಿಕೊಡುತ್ತಾರೆ.

ಇವರ ವಿಳಾಸ :

**ಮಂತ್ರಾಲಯ ರಾಮಾಚಾರ್ಯ,**
ವೈದಿಕ ಪಾಠಶಾಲಾ, ವಿಷ್ಣುಪಾದ ಮಾರ್ಗ,
ಕಾಮಾಖ್ಯ ಮಂದಿರದ ಹತ್ತಿರ,
ಪೋಸ್ಟ್ ಗಯಾ - 823001 (ಬಿಹಾರ್)
ದೂರವಾಣಿ : 0631-434685 (ಮನೆ)

ಕಾಶಿಯಿಂದ ಗಯಾ ಕ್ಷೇತ್ರಕ್ಕೆ ತಲುಪಿದ ದಿನ ಜನವರಿ 26 ಗಣರಾಜ್ಯೋತ್ಸವದ ಬಗ್ಗೆ ಶ್ರೀ ಮತ್ತೂರರು ಮಾತನಾಡಿದರು. ರಾತ್ರಿ ಪ್ರಯಾಣ ಮಾಡಿದ್ದರಿಂದ ಸ್ವಲ್ಪ ವಿಶ್ರಾಂತಿ ಪಡೆದು ಮುಂದಿನ ಪ್ರಯಾಣಕ್ಕೆ ಸಿದ್ಧತೆ ನಡೆಸಿದೆವು. ಗಯಾ ಕ್ಷೇತ್ರದ ಮಹತ್ವ, ವಿಷ್ಣುಪಾದದ ಬಗ್ಗೆ, ಅಕ್ಷಯ ವಟವೃಕ್ಷದ ಬಗ್ಗೆ ಎಲ್ಲವನ್ನೂ ಪರೋಕ್ಷವಾಗಿ ನನ್ನೊಡನೆ ಬಂದ ನಿಮಗೆಲ್ಲರಿಗೂ ಸವಿಸ್ತಾರವಾಗಿ ತಿಳಿಸಿ ನನ್ನೊಡನೆ ಕರೆದುಕೊಂಡು ಬಂದಿದ್ದೇನೆ. ಇಲ್ಲಿ ಗಯಾ ಕ್ಷೇತ್ರವನ್ನು, ಗಯಾ ಕ್ಷೇತ್ರದ ಸ್ಥಳ ಪುರಾಣವನ್ನು ತಿಳಿದುಕೊಂಡದ್ದಾಯಿತು, ಬನ್ನಿ ಬುದ್ಧ ಗಯಾಕ್ಕೆ ಹೋಗೋಣ.

(ಮುಂದುವರಿಯುವುದು)

**ಆರ್. ಎಸ್. ಕಾಶೀಪತಿ**
ಕುಶಾಲನಗರ

## ಸಂಗೀತ ಸಮ್ಮೇಳನ

ತಾ|| 06.10.2004 ರಿಂದ 10.10.2004 ರವರೆಗೆ ರಾಮನಾಥಪುರದಲ್ಲಿ ಕರ್ನಾಟಕ ಗಾನ ಕಲಾ ಪರಿಷತ್‌ನ ಆಶ್ರಯದಲ್ಲಿ 35ನೇ ಸಂಗೀತ ಸಮ್ಮೇಳನವು ನಡೆಯಿತು. ಪರಿಷತ್‌ನ ಅಧ್ಯಕ್ಷರು ನಮ್ಮವರೇ ಆದ ಗಾನ ಕಲಾ ಭೂಷಣ ಆರ್. ಕೆ. ಪದ್ಮನಾಭ ಅವರು.





## ಬೆಂಗಳೂರು ಸಂಕೇತಿ ಮಹಿಳಾ ಸಮಾಜ

**ತಾ|| 25.09.04** ರಂದು ಗಣೇಶ ಹಬ್ಬದ ಪ್ರಯುಕ್ತ 'ಅಬಲಾಶ್ರಮ' ದಲ್ಲಿ ವಿಶೇಷ ಮಾಸಿಕ ಮಿಲನ ಸಭೆ. ಬೆಳಿಗ್ಗೆ 11 ಗಂಟೆಗೆ ಎಲ್ಲಾ ಸದಸ್ಯೆಯರೂ 'ಅಬಲಾಶ್ರಮ' ದ ಅಂಗಳದಲ್ಲಿ ಸಂಭ್ರಮದಿಂದ ಬಂದು ಸೇರಿದರು. ಹೊಸ ಸದಸ್ಯೆ ಶ್ರೀಮತಿ ಸುಶೀಲಾ ಅವರು ಗಣೇಶ ಸ್ತುತಿಯನ್ನು ಹಾಡಿ, ಕಾರ್ಯಕ್ರಮಕ್ಕೆ ಒಂದು ಆರಂಭವನ್ನು ಕೊಟ್ಟರು. ನಂತರ ಕಾರ್ಯದರ್ಶಿ ರು. ಕೃ. ಗೀತಾಮಣಿಯವರು ಎಲ್ಲರನ್ನೂ ಸ್ವಾಗತಿಸಿದರು. ಹೊಸ ಸದಸ್ಯೆ ಶ್ರೀಮತಿ ರು. ಕೃ. ಭಾಗ್ಯಲಕ್ಷ್ಮಿಯವರು ಗಣಪತಿ ಪೂಜೆ ಮಾಡಿ ಮಂಗಳಾರತಿ ಮಾಡಿದರು. ಮಂಗಳಾರತಿ ಸ್ವೀಕರಿಸುತ್ತಿದ್ದಂತೆಯೇ ಸದಸ್ಯೆಯರೆಲ್ಲರೂ ಆಟವಾಡಲು ಸಿದ್ಧರಾದರು. ಎರಡು ರೀತಿಯ ಆಟಗಳನ್ನು ಆಡಿಸಲಾಯಿತು. ಆಟಗಳ ನಂತರ ಅಂದಿನ ಮಿಲನ ಸಭೆಯ ಉದ್ದೇಶದ ಕಡೆ ಕಾರ್ಯಕ್ರಮ ಮುಂದುವರಿಯಿತು. ಪ್ರಥಮವಾಗಿ 'ಅಬಲಾಶ್ರಮ'ಕ್ಕೆ ಅಗತ್ಯವಾಗಿ ಬೇಕಾಗಿದ್ದಂತಹ **'ಗ್ಲೋಬ್'**ನ್ನು ಸಂಘವು ಆಶ್ರಮಕ್ಕೆ ನೀಡಿತು. ಇದನ್ನು ನಮ್ಮ ಸದಸ್ಯೆ **ಶ್ರೀಮತಿ ಶಾಂತಲಕ್ಷ್ಮಿ** ತಮ್ಮ ಮಗಳು **ದಿ|| ನಳಿನಿಯ ಹೆಸರಿನಲ್ಲಿ** ಪ್ರಾಯೋಜಿಸಿದರು. ಅವರಿಗೆ ಸಂಘದ ಪರವಾಗಿ ಧನ್ಯವಾದಗಳನ್ನು ಅರ್ಪಿಸಲಾಯಿತು. ಅಬಲಾಶ್ರಮದಲ್ಲಿರುವ 30 ಜನರಿಗೆ ನೆನಪಿನ ಕಾಣಿಕೆಗಳನ್ನು ನೀಡಲಾಯಿತು. ಓದುವ ಹುಡುಗಿಯರಿಗೆ ಅನುಕೂಲವಾಗಲೆಂದು **25 ಲಾಂಗ್ ನೋಟ್ ಬುಕ್ಸನ್ನು** ನೀಡಲಾಯಿತು. ಮಿಲನ ಸಭೆಯಲ್ಲಿ ಸೇರಿದ್ದ ಎಲ್ಲಾ ಸದಸ್ಯೆಯರೂ ಸೇರಿ **ಒಟ್ಟು 4,537.00 ರೂ.**ಗಳನ್ನು ಸಂಗ್ರಹಿಸಿ ಅಬಲಾಶ್ರಮಕ್ಕೆ **ಸಹಾಯ ಧನ**ವನ್ನಾಗಿ ನೀಡಲಾಯಿತು. **ಅಬಲಾಶ್ರಮದವರಿಗೆ ಅಂದಿನ ಊಟದ ಖರ್ಚನ್ನು ಸಂಘವು ಪ್ರಾಯೋಜಿಸಿತ್ತು.** ನಂತರ ಅಲ್ಲಿ ಆಡಿಸಿದ ಎರಡೂ ಆಟಗಳಲ್ಲಿ ಗೆದ್ದವರಿಗೆ ನಮ್ಮ ಅಧ್ಯಕ್ಷೆಯವರು ಬಹುಮಾನ ನೀಡಿದರು. ಅಷ್ಟರವೇಳೆಗೆ ಆ ಸಂಸ್ಥೆಯ ಮೇಲ್ವಿಚಾರಕರಾಗಿರುವ ಬಿ. ವಿ. ಶೇಷ ಅವರು ನಮ್ಮ ಸಂಘದಿಂದ ಅವರ ಆಶ್ರಮಕ್ಕೆ ಬಹಳ ಸಹಾಯ ದೊರೆತಿದೆ ಎಂದು ತಿಳಿಸಿ, ಸಂಘಕ್ಕೆ ಧನ್ಯವಾದಗಳನ್ನು ತಿಳಿಸಿದರು. ನಂತರ ಅಬಲಾಶ್ರಮದವರ ಒಡಗೂಡಿ, ಸಜ್ಜಪ್ಪ, ಚೋಮ ಮತ್ತು ಸಮೋಸಗಳ ವಿಶೇಷ ಊಟವನ್ನು ಎಲ್ಲರೂ ಸಂತಸದಿಂದ ಸ್ವೀಕರಿಸಿದರು. ಹಬ್ಬದ ಪ್ರಯುಕ್ತ ಎಲ್ಲರಿಗೂ ಊಟದ ನಂತರ ದಕ್ಷಿಣೆ ಸಹಿತ ತಾಂಬೂಲ ನೀಡಲಾಯಿತು. ಈ **ದಕ್ಷಿಣೆ,**

**ಎಲೆ ಅಡಿಕೆ ಮತ್ತು ತಾಂಬೂಲ**ಗಳನ್ನು ನಮ್ಮ ಸದಸ್ಯೆ **ಗೀತಾ ಕೃಪ** ಅವರು ತಮ್ಮ **ತಾಯಿ ದಿ|| ಗೋದಾವರಿ** ಅವರ ಹೆಸರಿನಲ್ಲಿ ಪ್ರಾಯೋಜಿಸಿದ್ದರು. ಅಂದಿನ ಕಾರ್ಯಕ್ರಮದ ಎಲ್ಲಾ ಖರ್ಚುಗಳನ್ನು ಅಂದಿನ ಆತಿಥೇಯರುಗಳೇ ವಹಿಸಿಕೊಂಡಿದ್ದರು. ಒಟ್ಟಿನಲ್ಲಿ ವರ್ಷಕ್ಕೊಮ್ಮೆ ನಡೆಯುವ ಹಬ್ಬದ ಈ ವಿಶೇಷ ಕಾರ್ಯಕ್ರಮ ಮನದಾಳದಲ್ಲಿ ಉಳಿಯುವಂತಹ ಕಾರ್ಯಕ್ರಮ ಎಂದು ಶ್ಲಾಘಿಸುತ್ತಾ ಎಲ್ಲರೂ ಮನೆಗೆ ತೆರಳಿದರು. ಅಂದಿನ ಆತಿಥೇಯರುಗಳು ಶ್ರೀಮತಿಯರಾದ ಆರ್. ಕೆ. ಗೀತಾಮಣಿ, ವಸುಂಧರಾ, ಜಯಲತಾ, ಬಿ. ಕೆ. ನಾಗಲಕ್ಷ್ಮಿ, ಸಾವಿತ್ರಿ, ಸುಕನ್ಯಾ, ಸರಸ್ವತಿ ವೆಂ, ಗೀತಾ ಕೃಪ, ಕೃಪಾ. ಎನ್, ಉಷಾ. ವಿ, ರತ್ನ, ಸುಶೀಲ, ಜಯ.

## ವಿಜೇತರುಗಳು

| | ಅಡುಗೆಮನೆ ಬಿಳಿ ಪದಾರ್ಥಗಳು | ಲೋಟ ಮತ್ತು ಸ್ಟ್ರಾ ಆಟ |
|---|---|---|
| I Prize | ವೀಣಾ ಕಪಾಲೇಶ್ವರ್ | ಶರಾವತಿ. ಎಂ. |
| II Prize | ಶಾಂತಾ ರಾವ್ | ಲಲಿತಾ. ಕೆ. |
| III Prize | ಸಂಧ್ಯಾ ಮಂಜುನಾಥ್ | ವೇದಾವತಿ. ಎಸ್. |

ವಿಜೇತರಿಗೆಲ್ಲಾ ಅಭಿನಂದನೆಗಳು

**ತಾ|| 30.10.04**ರಂದು ಆದರ್ಶ ವನಿತಾ ಸಮಾಜದಲ್ಲಿ **ವೇ|| ಬ್ರ|| ಶ್ರೀ ಸುಬ್ಬರಾಯ ಶರ್ಮ** ಅವರಿಂದ ನವರಾತ್ರಿಯ ಪ್ರಯುಕ್ತ **''ದೇವೀ ಮಹಾತ್ಮೆ''** ಯ ಬಗ್ಗೆ ಬೆಳಿಗ್ಗೆ 11.30ಕ್ಕೆ ಪ್ರವಚನವನ್ನು ಏರ್ಪಡಿಸಲಾಗಿತ್ತು. ಪ್ರವಚನದ ಅನಂತರ ವೇ|| ಬ್ರ|| ಶ್ರೀಗಳಿಗೆ ಶಾಲು ಹೊದಿಸಿ ಸನ್ಮಾನಿಸಲಾಯಿತು. ಶಾಲನ್ನು ನಮ್ಮ ಸದಸ್ಯೆ ಶ್ರೀಮತಿ ಗೀತಾ ಮೂರ್ತಿಯವರು ಪ್ರಾಯೋಜಿಸಿದರು. ಅಂದಿನ ಆತಿಥೇಯರುಗಳು ಶ್ರೀಮತಿಯರಾದ ಗೀತಾ ಮೂರ್ತಿ, ಶೈಲಜಾ, ಮೀರಾ, ಲೀಲಾ. ಎನ್, ವನಿತಾ. ಎಂ, ಸುನೀತಾ. ಕೆ.ಪಿ. ಮತ್ತು ಮಂಜುಳಾ ಜೆ. ಅವರುಗಳು. ಬಂದವರೆಲ್ಲರೂ ಮನಸ್ಸಿಗೆ ಮತ್ತು ಹೊಟ್ಟೆಗೆ ಸಿಕ್ಕ ಎರಡೂ ಊಟವೂ ಬಹಳ ಚೆನ್ನಾಗಿತ್ತು ಎಂದು ಹೇಳುತ್ತಾ, ತೆರಳಿದರು.

**ರು. ಕೃ ಗೀತಾಮಣಿ**
ಗೌ|| ಕಾರ್ಯದರ್ಶಿ
ದೂ : 26695657





# ಆಪತ್ಕಾಲ ಪರಿಹಾರ ನಿಧಿ
# (Distress Relief Fund)

ಅಮೇರಿಕದಲ್ಲಿರುವ ಸಂಕೇತಿ ಮಹನೀಯರುಗಳು ಶ್ರೀ ಬಿ.ಕೆ.ಎಸ್. ಸ್ವಾಮಿಯವರ ನೇತೃತ್ವದಲ್ಲಿ ಉಭಯ ಸಂಕೇತಿಗಳ (ಕೌಶಿಕ ಮತ್ತು ಬೆಟ್ಟದಪುರ) ಅನುಕೂಲಕ್ಕಾಗಿ ಆಪತ್ಕಾಲ ಪರಿಹಾರ ನಿಧಿಯನ್ನು ಸ್ಥಾಪಿಸಿ, ಈ ವರ್ಷಕ್ಕಾಗಿ ಸುಮಾರು 50,000/- ರೂ.ಗಳನ್ನು ಕಳುಹಿಸಿದ್ದಾರೆ.

ಹೆಸರೇ ಸೂಚಿಸುವಂತೆ, ಈ ನಿಧಿಯ ಉದ್ದೇಶ ಆಪತ್ಕಾಲದಲ್ಲಿದ್ದು ಮುಖ್ಯವಾಗಿ ಅನಾರೋಗ್ಯದಿಂದ ನರಳುತ್ತಿರುವ, ಅನುಕೂಲತೆಗಳಿಲ್ಲದಿರುವ ಸಂಕೇತಿ ಬಂಧುಗಳಿಗೆ ಧನ ಸಹಾಯ ಮಾಡುವುದು. ಯಾರೊಬ್ಬರಿಗೆ 10,000/- ರೂ.ಗಳಿಗಿಂತ ಹೆಚ್ಚು ಧನ ಸಹಾಯ ಮಾಡಲಾಗುವುದಿಲ್ಲ.

ಇದರ ಉಪಯೋಗವನ್ನು ಪಡೆಯ ಬಯಸುವವರು ಆಯಾ ಸಂಘದ ಕಾರ್ಯದರ್ಶಿಯವರಿಗೆ, ಪೂರ್ಣ ಮಾಹಿತಿ ಕೊಟ್ಟು, ಇಬ್ಬರು ಸಂಕೇತಿ ಗಣ್ಯರುಗಳಿಂದ ಶಿಫಾರಸ್ಸು ಮಾಡಿಸಿ, ಅರ್ಜಿಯನ್ನು ಕಳುಹಿಸಬೇಕು. ಎರಡೂ ಸಂಘಗಳ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು ಸಭೆ ಸೇರಿ, ಬಂದ ಅರ್ಜಿಗಳ ಬಗ್ಗೆ ಅಂತಿಮ ನಿರ್ಧಾರವನ್ನು ತೆಗೆದುಕೊಂಡು ಸೂಕ್ತ ಧನ ಸಹಾಯವನ್ನು ಮಾಡಲಾಗುತ್ತದೆ.

| | |
|---|---|
| **ಆರ್.ಎಸ್. ಭಾಸ್ಕರ ಅವಧಾನಿ** | **ಸಿ. ಕೆ. ಮಂಜುನಾಥ,** |
| ಕಾರ್ಯದರ್ಶಿ | ಪ್ರಧಾನ ಕಾರ್ಯದರ್ಶಿ |
| ಬೆಟ್ಟದಪುರ ಸಂಕೇತಿ ಸಂಘ | ಕೌಶಿಕ ಸಂಕೇತಿ ಸಂಘ |

## ವಾರ್ತಾ ನಿಧಿ

ಸಂಘದ ಸದಸ್ಯರ ನಡುವೆ ಮುಖ್ಯಸಂಪರ್ಕ ಸೇತುವೆಯಾಗಿರುವ ಸಂಘದ ಚಟುವಟಿಕೆಗಳ ಮುಖವಾಣಿಯಾಗಿರುವ ಬಾಂಧವರ ಪ್ರತಿಭೆಗಳಿಗೆ ಒಂದು ಕನ್ನಡಿಯಂತಿರುವ ನಿಮ್ಮ 'ಸಂಕೇತಿ ವಾರ್ತಾ'ವನ್ನು ಸದೃಢಗೊಳಿಸಿ, ಗಟ್ಟಿಯಾಗಿ ತನ್ನ ಕಾಲಮೇಲೆ ನಿಲ್ಲುವಂತೆ ಮಾಡುವ ಹೊಣೆ ನಮ್ಮ-ನಿಮ್ಮೆಲ್ಲರ ಮೇಲಿದೆ. ಈ ನಿಟ್ಟಿನಲ್ಲಿ ಬಾಂಧವರಿಂದ ಉದಾರ ಕೊಡುಗೆಗಳನ್ನು ನಿರೀಕ್ಷಿಸಲಾಗಿದೆ. ಮಾನ್ಯ ಬಾಂಧವರು ತಮ್ಮ ಉದಾರ ಮನಸ್ಸಿನ ಕೊಡುಗೆಗಳನ್ನು ಅಧಿಕ ಸಂಖ್ಯೆಯಲ್ಲಿ ನೀಡಿ ಈ ಔಚಿತ್ಯಪೂರ್ಣ ಕಾರ್ಯದಲ್ಲಿ ಭಾಗಿಗಳಾಗಬೇಕೆಂದು ಕೋರುತ್ತೇವೆ. ಎರಡು ಪ್ರಕಾರದ ದಾನಿಗಳನ್ನು ಗುರುತಿಸಲಾಗುವುದು.

**ರೂ. 5,000/- ಕೊಡುಗೆ ನೀಡುವವರು**
**ಮಹಾಪೋಷಕರು**

**ರೂ. 1,000/- ಕೊಡುಗೆ ನೀಡುವವರು**
**ಪೋಷಕರು**

ದಾನಿಗಳ ಹೆಸರುಗಳನ್ನು ಪ್ರತಿ ತಿಂಗಳೂ 'ವಾರ್ತಾ'ದಲ್ಲಿ ಪ್ರಕಟಿಸಲಾಗುವುದು.

ನಮ್ಮ ಕರೆಗೆ ಓಗೊಟ್ಟು ಈ ತಿಂಗಳು ಸ್ಪಂದಿಸಿದ ಮಾನ್ಯ ಬಾಂಧವರು

| | |
|---|---|
| **ಬಿ. ಎನ್. ವೆಂಕಟರಾಮಯ್ಯ** | **ಪೋಷಕರು** |
| **ಮೋಹನಮೂರ್ತಿ** | **ಪೋಷಕರು** |





## ಬೆಂಗಳೂರು ಶಾಖೆಯ ಸರ್ವಸದಸ್ಯರ ಸಾಮಾನ್ಯ ಸಭೆ ಮತ್ತು ಮುಂದಿನ ಕಾರ್ಯಕಾರಿ ಸಮಿತಿಯ ಚುನಾವಣೆ

ಬೆಂಗಳೂರು ಶಾಖೆಯ ಸರ್ವಸದಸ್ಯರ ಸಾಮಾನ್ಯ ಸಭೆಯನ್ನು ದಿನಾಂಕ 05.12.04ರಂದು ನಡೆಸಲು ಸಮಿತಿ ತೀರ್ಮಾನಿಸಿದೆ. ಬೆಂಗಳೂರಿನ ಎಲ್ಲಾ ಸಂಕೇತಿಗಳೂ ಭಾಗವಹಿಸಿ, ಮುಂದಿನ ಕಾರ್ಯಕಾರಿ ಸಮಿತಿಯನ್ನು ಚುನಾಯಿಸಬೇಕಾಗಿ ಪ್ರಾರ್ಥಿಸುತ್ತೇವೆ.

ಸಮಯ : **ಬೆಳಿಗ್ಗೆ 11 ಗಂಟೆ**

ಸ್ಥಳ : **ಮಾಸ್ತಿ ರಂಗಮಂದಿರ, ಶಂಕರಮಠ ರಸ್ತೆ, ಶಂಕರಪುರಂ, ಬೆಂಗಳೂರು – 560 004.**

ನೂತನ ಕಾರ್ಯಕಾರಿ ಸಮಿತಿ ಚುನಾವಣೆನಂತರಭೋಜನದ ಏರ್ಪಾಡು ಮಾಡಲಾಗಿದೆ.

## ಬೆಂಗಳೂರು ಶಾಖೆಯ ಪುರಂದರ ತ್ಯಾಗರಾಜ ಆರಾಧನಾ ಮಹೋತ್ಸವ

ಪ್ರಿಯ ಸಂಕೇತಿ ಬಂಧುಗಳೇ ಭಕ್ತಿಪೂರ್ವಕವಾಗಿ ನಡೆದ ತ್ಯಾಗರಾಜ ಆರಾಧನೆ ನಮ್ಮೆಲ್ಲರ ಮನಸ್ಸಿನಲ್ಲಿ ಇನ್ನೂ ಹಸಿರಾಗಿರುವಂತೆಯೇ ಮುಂದಿನ ತ್ಯಾಗರಾಜ ಆರಾಧನಾ ಮಹೋತ್ಸವದ ದಿನ ಓಡೋಡಿ ಬಂದಿದೆ. ಕಳೆದ ವರ್ಷದಂತೆಯೇ ಈ ವರ್ಷವೂ ಜಯನಗರದ ಶ್ರೀ ಜಯರಾಮ ಸೇವಾ ಮಂಡಲಿಯಲ್ಲಿ ಶ್ರೀ ಪುರಂಧರ ತ್ಯಾಗರಾಜ ಆರಾಧನೆಯನ್ನು ದಿನಾಂಕ 30.01.05ರಂದು ನಡೆಸಲು ತೀರ್ಮಾನಿಸಲಾಗಿದೆ. ಕಳೆದ ವರ್ಷದಂತೆಯೇ ಈ ವರ್ಷವೂ ಎಲ್ಲರೂ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಬೇಕೆಂದು ಪ್ರಾರ್ಥಿಸುತ್ತೇವೆ.

ಕಾರ್ಯಕಾರಿ ಸಮಿತಿ ಪರವಾಗಿ
**ಎಸ್. ಸಿ. ಮಂಜುನಾಥ**
ಅಧ್ಯಕ್ಷರು
ಬೆಂಗಳೂರು ಶಾಖೆ

## Bettadapura Sankethi Sangha (R.)
## Bangalore

# List of Awardees of General Scholarships for the year 2004-2005

| Name | Parent's Name | Place | Std | Amount |
|---|---|---|---|---|
| Ramnag. H. V | Vishwanatha | Mysore | 7 | 1000 |
| Surabhi N. Jois | Nagaraj. S | Mysore | 8 | 1000 |
| Pooja Datta | Rajan Datta | Bangalore | 8 | 1000 |
| Shreyas Avadhani | Balamukund B. R. | Bangalore | 8 | 1000 |
| Vinay. B. A | Ashok. B. V | Bangalore | 8 | 1000 |
| Divya. B | Balasubramanya | Mysore | 8 | 1000 |
| Ramya. M | Mukund N. Rao | Bangalore | 9 | 1000 |
| Bhavya. H. S | Subbanna. H. K | Bangalore | 9 | 1000 |
| Rashmi. R | Ravikumar. R. S | Bangalore | 9 | 1000 |
| Sandeep. S | Shivananda. S. M | Bangalore | 9 | 1000 |
| Skanda. N | Nagaraj. H. S | Bangalore | 9 | 1000 |
| Kavya. B. A | Ashok. B. V | Bangalore | 9 | 1000 |
| Divyashree. R | Ramesh Rao | Mysore | 9 | 1000 |
| Vijay. D | Dhruvanarayan B K | Bangalore | 10 | 1000 |
| Aishwarya. S. M | Mallikarjuna. S. M | Saligrama | 10 | 1000 |





| Name | Parent's Name | Place | Std | Amount |
|---|---|---|---|---|
| Keerthi. A. P | Panduranga. A. S | Agrahara | 10 | 1000 |
| Kushal. S. A | Anantha Subramanya S. R. | Bangalore | I PUC | 1500 |
| Shubha. H. K | Keshavamurthy H R | Hanasoge | I PUC | 1500 |
| Deepashree H. V | Vishwanatha H. R | Mysore | II PUC | 1500 |
| Vageesha. M. R | Ramachandra M K | Davangere | II PUC | 1500 |
| Shilpa M Prabhu | Mahadevaprabhu N | Mysore | II PUC | 1500 |
| Swathi Sreenath | Sreenath. K. V | Mysore | II PUC | 1500 |
| Madhukar Bharadwaj H. N | Nagaraju. H. R | Bangalore | II PUC | 1500 |
| Deepak Rao. R | Ramesh Rao | Mysore | II PUC | 1500 |
| Sandhya. R | Ramaprasad. R. S | Davangere | I Dip. | 2000 |
| Bhagyalaxmi. C | Chandrasekaraiah | Bangalore | III Dip. | 2000 |
| Shwetha. R. A | Ananthaiah. R. S | Bangalore | I B.Sc. | 2000 |
| Naveen. N | Narasinga Rao | Mysore | I BBM | 2000 |
| Harsha. B. M | Muralidhara B. V | Bangalore | I BBM | 2000 |
| Vinutha. U | Umesh. H. N | Mysore | II B.Com | 2000 |
| Ramya. R | Ramaprasad R. S | Davangere | III B.Com | 2000 |
| Divya. H. R | Ramachandra. H. R | Bangalore | III B.Com | 2000 |

# Akhila Karnataka Brahmana Mahasabha (R.)

'Gayathri Bhavana', 3070, Gayathri Bhavana Road,
9th Main, BSK 2nd Stage, Bangalore - 560 070

## 8th State Level Brahmins' Conference

The Akhila Karnataka Brahmana Mahasabha since its inception in 1974 has been carrying out various activities through its network of over 400 federated Brahmin Institutions for the welfare of the community. It also conducting various awareness programmes of Sanghatana, Samskara, Swavalambana to make the youth aware of the necessity of Sanghatana of the community in the present juncture for mutual help and development of the community. With this in view, it is proposed to conduct 8th State Level Brahmin's Conference from 23rd to 26th of December 2004 at Bangalore. It is also proposed to establish a Ladies Hostel at Bangalore. Seeking your help and co-operation.

**B.N.V. Subramanya**
President






**With best Compliments from**
**M/s KUMAR ELECTRICALS**
**Engineers and Class I Licensed Electrical Contractors.**
**R. V. VASANTHKUMAR**
***No. 8(S), 1st Phase, 1st Stage,***
***Chandra Layout, Vijayanagar,***
***Bangalore - 560 040.***
***Ph : 080 - 23215297, 56964119***
***Fax : 080 - 23394884, 23396551 (R)***

**Pragathi Enterprises**
**Electrical Engineers & Contractors**
**B. S. N. Murthi**
**S. Saraswathi**
No. 32 "K", 11th Cross, 19th Main,
Rajajinagar,
Banglaore - 560 010.
Phone : 080 - 23321145
Mobile : 9448324336
E-mail : murthi203@yahoo.com

## Horoscope - Reading and Palm Reading

**Horoscope are calculated on the basis of sidereal system**

Predictions will be given through planetory aspects.

**Just give your Name, Date of Birth, Birth Time, Weekday and Birth Place.**

***For details contact :***

**H. K. SATYAPRAKASH**
**S/o. H. S. Krishna Murthy**
**Grandson of Javaraya Meshtru of Hanasoge**
No. 146, Raghavendra Block, 15th Main Road,
Kalidasa Layout, Near Raghavendra Mutt, Srinagar,
Bangalore - 560 050.
**Cell No. : 9886334667, 9844125411, 9845994578**

## NATURE CURE CONSULTANT

**ಪ್ರಕೃತಿ ಚಿಕಿತ್ಸಾ ಸಲಹೆಗಳಿಗೆ ಸಂಪರ್ಕಿಸಿ :**

**H. K. SATYAPRAKASH**
No. 146, Raghavendra Block, 15th Main Road,
Kalidasa Layout, Near Raghavendra Mutt, Srinagar,
Bangalore - 560 050.
**Cell No. :**
**9886334667, 9844125411, 9845994578**







## PRITHVI COMPUTER NETWORKS

**Personal Computer (PC) Assembly, Computer Networking, AMCs for Computer Labs / Institutions are done.**

***For more details contact :***

**Arun. L.**
No. 448/A, First Floor, 8th Main, 7th Cross,
Hanumanthanagar, Bangalore - 560 019.
Phone : **9845458216**
E-mail : arun177@indiatimes.com

## NATURE SURF ADVENTURERS

**Adventure sports like Trekking, Parasailing River rafting, River Crossing, Rappling Rock-climbing are conducted in the weekends.**

***Contact :***

**Arun. L. - 9845458216**

**Rajesh - 9448434519**

E-mail : nature_surf@rediffmail.com